ಮೂಲಭೂತವಾದ

ಮತ್ತು

ಇಸ್ಲಾಮ್

ಉರ್ದು ಮೂಲ

ಡಾ.ಫರ್ಖುರ್ರಹ್ಮಾನ್ ಫರೀದಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಸೆಪ್ಟೆಂಬರ್ 11ರ ಘಟನೆಯ ನಂತರ ಇಸ್ಲಾಮ್ ಮತ್ತು ಮುಸ್ಲಿಮರು ಎಲ್ಲೆಡೆ ವಿಮರ್ಶೆಗೆ ಗುರಿಯಾಗಿದ್ದಾರೆ. ಭಯೋತ್ಪಾದನೆಯು ಇಸ್ಲಾಮಿನಲ್ಲಿ ರಕ್ತಗತವಾಗಿದೆ. ಅದಕ್ಕೆ ಮೂಲ ಕಾರಣ ಮುಸ್ಲಿಮರು ಮೂಲಭೂತವಾದದ ಮೇಲೆ ನಂಬಿಕೆಯಿರಿಸುವುದು ಎಂಬಿತ್ಯಾದಿಯಾಗಿ ಮಾಧ್ಯಮಗಳು ವ್ಯಾಪಕ ಪ್ರಚಾರದಲ್ಲಿ ತೊಡಗಿವೆ. ಆದರೆ ಭಯೋತ್ಪಾದನೆಗೂ ಇಸ್ಲಾಮಿಗೂ ಯಾವುದೇ ಸಂಬಂಧವಿಲ್ಲ. ಮಾತ್ರವಲ್ಲ, ಇಂದು ಮುಸ್ಲಿಮರೇ ಅತ್ಯಂತ ಹೆಚ್ಚು ಭಯೋತ್ಪಾದನೆಗೆ ಗುರಿಯಾದ ಜನಾಂಗವಾಗಿದ್ದಾರೆ. ವಾಸ್ತವದಲ್ಲಿ ಎಲ್ಲ ಸ್ವರೂಪದ ಭಯೋತ್ಪಾದನೆಯನ್ನು ಇಸ್ಲಾಮ್ ಖಂಡಿಸುತ್ತದೆ.

ಮೂಲಭೂತವಾದ ಕೂಡಾ ಪಾಶ್ಚಾತ್ಯರ ನಿಂದನೆಗೆ ಗುರಿಯಾದ ಒಂದು ಪದವಾಗಿದೆ. ಲೋಕದಲ್ಲಿ ಎಲ್ಲ ಧರ್ಮವಿಭಾಗದವರೂ ಧರ್ಮೇತರರೂ ಕೆಲವು ಮೂಲಭೂತ ವಿಚಾರ ಸಿದ್ಧಾಂತಗಳಲ್ಲಿ ನಂಬಿಕೆಯಿರಿಸುವವರಾಗಿದ್ದಾರೆ. ಅದನ್ನು ಕೇವಲ ಇಸ್ಲಾಮಿನ ವಿರುದ್ಧ ಮಾತ್ರ ಆರೋಪಿಸುವುದರಲ್ಲಿ ಹುರುಳಿಲ್ಲ. ಇಸ್ಲಾಮ್ ದೈವಿಕ ಧರ್ಮವಾಗಿದೆ. ಕೆಲವು ಮೂಲಭೂತ ವಿಷಯಗಳಲ್ಲಿ ದೃಢವಾಗಿ ನಂಬಿಕೆಯಿಟ್ಟು ಅದರ ಆಧಾರದಲ್ಲಿ ಜೀವನ ನಡೆಸುವಂತೆ ಅದು ಬೋಧಿಸುತ್ತದೆ.

ಏಕದೇವತ್ವ, ಪ್ರವಾದಿತ್ವ ಮತ್ತು ಪರಲೋಕ ಜೀವನದ ಮೇಲಿನ ನಂಬಿಕೆಯ ಆಧಾರದಲ್ಲಿ ನಡೆಸುವ ಜೀವನವು ಮಾನವಕುಲದ ಪಾಲಿಗೆ ಅನುಗ್ರಹವಾಗಿದೆ. ಆದುದರಿಂದ ಇಸ್ಲಾಮ್ ಮತ್ತು ಮೂಲಭೂತ ವಾದದ ವಾಸ್ತವಿಕತೆಯನ್ನು ಈ ಕಿರುಹೊತ್ತಿಗೆಯಲ್ಲಿ ಸ್ಪಷ್ಟ ಪಡಿಸಲಾಗಿದೆ. ಪಕ್ಷಪಾತದ ಕನ್ನಡಕವನ್ನು ತೆಗೆದಿಟ್ಟು ನಡೆಸುವ ಅಧ್ಯಯನವು ಇಸ್ಲಾಮಿನ ಕುರಿತಾದ ತಪ್ಪು ತಿಳುವಳಿಕೆಗಳನ್ನು ನೀಗಿಸುವಲ್ಲಿ ಸಹಕಾರಿಯಾಗಬಲ್ಲುದು. ಈ ನಿಟ್ಟಿನಲ್ಲಿ ಖ್ಯಾತ ಚಿಂತಕ ಡಾ| ಫಝ್ಲುರ್ರಹ್ಮಾನ್ ಫರೀದಿಯವರ ಈ ಕಿರು ಹೊತ್ತಿಗೆಯು ಪ್ರಯೋಜಕಾರಿಯಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಕೆಲವು ಮಾತುಗಳು

ಇಂದು ಇಸ್ಲಾಮ್ ಮತ್ತು ಮುಸ್ಲಿಮರ ವಿರುದ್ಧ ಝಿಯೋನಿಸ್ಟರು ಹಾಗೂ ಅವರ ಬೆಂಬಲಿಗರು ನಾಲ್ಕೂ ದಿಕ್ಕಿನಿಂದ ಆಕ್ರಮಣ ನಡೆಸುತ್ತಿದ್ದಾರೆ. ಸುಳ್ಳಾರೋಪಗಳ ಬಿರುಗಾಳಿ ಬಲವಾಗಿ ಬೀಸುತ್ತಿದೆ. ಇನ್ನೇನು, ಮಿಥ್ಯ ಶಕ್ತಿಗಳು ಸತ್ಯದ ಬೆಳಕನ್ನು ನಂದಿಸಿ ಬಿಡುತ್ತವೆಯೇನೋ ಎಂಬಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ. ಮುಸ್ಲಿಮರನ್ನು ಮೂಲಭೂತವಾದಿಗಳೆಂದೂ ಭಯೋತ್ಪಾದಕರೆಂದೂ ಘೋಷಿಸುವುದು ಅವರ ಇತ್ತೀಚಿನ ತಂತ್ರ. ನ್ಯೂಯಾರ್ಕ್‌ನ 'ವರ್ಲ್ಡ್ ಟ್ರೇಡ್ ಸೆಂಟರ್' ಮೇಲಿನ ಆಕ್ರಮಣದಿಂದ ಆರಂಭಿಸಿ ಮುಂಬೈ ಬಾಂಬ್ ಸ್ಫೋಟದ ವರೆಗೆ ಎಲ್ಲ ದುಷ್ಕೃತ್ಯಗಳಿಗೂ ಮುಸ್ಲಿಮರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ. ಹೆಚ್ಚುತ್ತಿರುವ ಭಯೋತ್ಪಾದನೆ ಮತ್ತು ರಕ್ತಪಾತಕ್ಕೂ ಇವರೇ ಕಾರಣ ಎಂದು ಹೇಳಿಬಿಟ್ಟರೆ ಕೆಲಸ ಸಾಧಿಸುವುದು ಮತ್ತಷ್ಟು ಸುಲಭವಾಗುತ್ತದೆ.

ಈಗ ನಡೆಯುತ್ತಿರುವ ಅಭಿಯಾನಕ್ಕೆ ಇನ್ನೊಂದು ಮುಖವೂ ಇದೆ. ಸ್ವತಃ ಇಸ್ಲಾಮ್ ಧರ್ಮವೇ ಅತ್ಯಂತ ಭಯೋತ್ಪಾದಕ ಮತ್ತು ಹಿಂಸಾಪ್ರಿಯ ಧರ್ಮ, ಮೂಲಭೂತವಾದದ ಬೆಳವಣಿಗೆಗೆ ಇಸ್ಲಾಮ್ ಅತ್ಯಂತ ಫಲವತ್ತಾದ ಭೂಮಿ ಎಂಬ ಚಿತ್ರಣ ನೀಡುವ ಪ್ರಯತ್ನ ಈಗ ನಡೆದಿದೆ. ಕೆಲವು ಮುಸ್ಲಿಮ್ ರಾಷ್ಟ್ರಗಳ ಆಡಳಿತಗಾರರು ಮತ್ತು ಸಮೂಹ ಮಾಧ್ಯಮಗಳು ಈ ಆರೋಪಗಳನ್ನು ಗಿಳಿಪಾಠದಂತೆ ಪುನರಾವರ್ತಿಸುತ್ತಿದ್ದಾರೆ. ಈಜಿಪ್ಟ್, ಅಲ್ಜೀರಿಯಾ ಮತ್ತು ಸಿರಿಯಾದಂಥ ದೇಶಗಳ ಆಡಳಿತಗಾರರಿಗೆ ತಮ್ಮ ಅಧಿಕಾರವೇ ಮುಖ್ಯ. ಪಶ್ಚಿಮದ ಪ್ರಭುಗಳನ್ನು ಸಂತೃಪ್ತಿ ಪಡಿಸುವುದೇ ಕುರ್ಚಿ ಉಳಿಸಲಿಕ್ಕಿರುವ ಮಾರ್ಗ ಎಂಬುದನ್ನು ಅವರು ಅರ್ಥ ಮಾಡಿ ಕೊಂಡಿದ್ದಾರೆ.

ಮೂಲಭೂತವಾದದ ಈ ಆರೋಪದ ಹಿಂದೆ ಇರುವುದು ಇಸ್ರೇಲ್ ಮತ್ತು ಅದರ ಬೆಂಬಲಿಗ ಶಕ್ತಿಗಳ ರಾಜಕೀಯ ಮಹತ್ವಾಕಾಂಕ್ಷೆಗಳು. ಅದರಲ್ಲೂ ವಿಶೇಷವಾಗಿ ಇಸ್ರೇಲ್ ಪಶ್ಚಿಮ ಏಷಿಯದ ಮೇಲೆ ತನ್ನ ರಾಜಕೀಯ ಪ್ರಾಬಲ್ಯ ಬಲಪಡಿಸುವ ಪ್ರಯತ್ನಗಳಲ್ಲಿ ತೊಡಗಿದೆ. ಈ ಗುರಿ ಸಾಧನೆಗಾಗಿ ಪಾಶ್ಚಾತ್ಯ ಶಕ್ತಿಗಳು ಪ್ರಜಾಪ್ರಭುತ್ವ, ನ್ಯಾಯ ಮತ್ತು ಮಾನವ ಹಕ್ಕುಗಳು ಸೇರಿದಂತೆ ಎಲ್ಲ ಮೌಲ್ಯಗಳನ್ನೂ ಉಲ್ಲಂಘಿಸಿ ಬಿಟ್ಟಿವೆ. ಸಮೂಹ ಮಾಧ್ಯಮಗಳ ಕಣ್ಣಿಗೆ ಅಲ್ಜೀರಿಯದ ಇಸ್ಲಾಮಿಸ್ಟರು, ಪ್ಯಾಲೆಸ್ತೀನ್

ಮತ್ತು ಅಫ್ಘಾನಿಸ್ತಾನದ ಮುಜಾಹಿದರು ಭಯೋತ್ಪಾದಕರಂತೆ ಕಾಣುತ್ತಾರೆ. ಆದರೆ ಬೋಸ್ನಿಯದ ಹತ್ಯಾಕಾಂಡ, ಅಲ್ಜೀರಿಯದ ದುಷ್ಟ ಸರಕಾರದ ದೌರ್ಜನ್ಯ, ಬರ್ಮಾ ಸರಕಾರದ ಅಕ್ರಮ, ಸಿರಿಯಾದ ಸರ್ವಾಧಿಕಾರಿ ಆಡಳಿತ, ಇಸ್ರೇಲ್‌ನ ಭಯೋತ್ಪಾದನೆ ಇದಾವುದೂ ಕಾಣಿಸುವುದಿಲ್ಲ. ಸುದ್ದಿ ಮಾಧ್ಯಮಗಳ ಮಟ್ಟಿಗೆ ಇವೆಲ್ಲವೂ ನ್ಯಾಯಯುತ ಮತ್ತು ಸಮರ್ಥನೀಯ.

ನಮ್ಮ ದೇಶದ ಆಡಳಿತಗಾರರು ಮತ್ತು ಬುದ್ಧಿಜೀವಿಗಳೂ ಈ ಅಪಪ್ರಚಾರ ದಲ್ಲಿ ಹಿಂದುಳಿದಿಲ್ಲ. ಅವರ ದೃಷ್ಟಿಯಲ್ಲೂ ಇಸ್ಲಾಮ್ ಮತ್ತು ಮುಸ್ಲಿಮ್ ಮೂಲಭೂತವಾದದ ಬೆಳವಣಿಗೆ ಅತ್ಯಂತ ಅಪಾಯಕಾರಿ. ಇದು ಮಾನವೀಯತೆ, ನ್ಯಾಯ, ಪ್ರಜಾಸತ್ತೆಯ ಮರಣಗಂಟೆ ಎಂಬುದು ಅವರ ನಿಲುವು. ಹಾಗಾಗಿ ನಮ್ಮ ಸಮೂಹ ಮಾಧ್ಯಮಗಳೂ ಬಹಳ ಉತ್ಸಾಹದಿಂದ ಈ ಪ್ರಯತ್ನಗಳಲ್ಲಿ ಭಾಗಿಯಾಗಿವೆ. ಈ ನಿಟ್ಟಿನಲ್ಲಿ ಅವು ಇಸ್ರೇಲ್ ನೀಡುವ ಸೂಚನೆಗಾಗಿ ಕಿವಿ ನಿಮಿರಿಸಿ ನಿಂತು ಕೊಂಡಿವೆ. ಸ್ವಾರಸ್ಯವೆಂದರೆ ತೀರಾ ಇತ್ತೀಚಿನ ವರೆಗೂ ಮುಸ್ಲಿಮೇತರ ಗುಂಪುಗಳ ಮೂಲಭೂತವಾದದ ಬಗ್ಗೆ ಮಾಧ್ಯಮಗಳು ಮೌನ ವಹಿಸಿದ್ದವು. ಆದರೆ ಬಾಬರಿ ಮಸೀದಿ ಧ್ವಂಸದ ನಂತರ ಈ ಬಗ್ಗೆಯೂ ಮಾಧ್ಯಮಗಳು ಗಮನ ಹರಿಸಲಾರಂಭಿಸಿವೆ.

ವಾಸ್ತವವೆಂದರೆ ಸಾಮಾನ್ಯ ಜನತೆಗೆ ನಿಜ ವಿಷಯ ತಿಳಿಯುವ ಕುತೂಹಲವಿದೆ. ಅವರಿಗೆ ಅತಿಕ್ರಮಿಗಳು, ಶೋಷಕರು ಯಾರೆಂಬುದು ಚೆನ್ನಾಗಿ ಗೊತ್ತು. ಪಾಶ್ಚಾತ್ಯ ಮತ್ತು ಝಿಯೋನಿಸ್ಟ್ ಶಕ್ತಿಗಳ ಘೋಷಣೆಗಳಲ್ಲಿ ಅವರಿಗೆ ನಂಬಿಕೆಯಿಲ್ಲ. ತಾವು ಪ್ರಜಾಸತ್ತೆ, ವಿಚಾರ ಸ್ವಾತಂತ್ರ್ಯದ ರಕ್ಷಕರೆಂಬ ಅವರ ವಾದವನ್ನು ಜನರು ನಂಬುತ್ತಿಲ್ಲ. ಆದ್ದರಿಂದ ಇಸ್ಲಾಮೀ ಚಿಂತಕರು, ವಿದ್ವಾಂಸರು ಈ ಅಪಪ್ರಚಾರದ ಹೂರಣ ಬಯಲಿಗೆಳೆಯಲು ಮುಂದಾಗಬೇಕಾಗಿದೆ.

ಆದರೆ ಈ ನಿಟ್ಟಿನಲ್ಲಿ ಒಂದು ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಸಾಮಾನ್ಯವಾಗಿ ನಮ್ಮ ಹೆಚ್ಚಿನ ಬರಹಗಳು ರಕ್ಷಣಾತ್ಮಕವಾಗಿರುತ್ತವೆ. ಇಲ್ಲವೇ ಕೇವಲ ಮುಸ್ಲಿಮ್ ವಾಚಕರನ್ನು ಮಾತ್ರ ದೃಷ್ಟಿಯಲ್ಲಿಟ್ಟು ವಿಷಯಗಳನ್ನು ವಿವರಿಸಲಾಗುತ್ತದೆ. ಒಂದು ವೇಳೆ ನಾವು ಇಸ್ಲಾಮಿನ ಮಾನವ ಪರ, ನ್ಯಾಯಯುತ, ಪ್ರಜಾಸತ್ತಾತ್ಮಕ ವಿಚಾರಧಾರೆಗಳನ್ನು ಜನರ ಮುಂದಿಟ್ಟರೆ ಇಸ್ಲಾಮ್‌ನ ಮೇಲೆ ಕವಿದಿರುವ ಕರಿಮೋಡಗಳು ಸರಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಕ್ಬರ್

ಎಸ್. ಅಹಮ್ಮದ್ ಅವರ ಇತ್ತೀಚಿನ ಪುಸ್ತಕದ ಬಗ್ಗೆ ಜಸ್ಟಿಸ್ ಕೃಷ್ಣ ಅಯ್ಯರ್ ಅವರ ಅನಿಸಿಕೆಗಳು ಈ ಮಾತನ್ನು ಮತ್ತಷ್ಟು ಪುಷ್ಟೀಕರಿಸುತ್ತವೆ. ಸರಿಯಾದ ರೀತಿಯಲ್ಲಿ ವಿಷಯಗಳನ್ನು ವಿವರಿಸಿದರೆ ಈಗ ಎದುರಾಗಿರುವ ಕಠಿಣ ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟವೇನಲ್ಲ. ಆದರೆ ನಮ್ಮ ವಿದ್ವಾಂಸರು, ಬುದ್ಧಿಜೀವಿಗಳು ಈ ಬಗ್ಗೆ ಗಂಭೀರ ನಿರ್ಲಕ್ಷ್ಯ ತೋರುತ್ತಿದ್ದಾರೆ. ಸಾಮಾನ್ಯವಾಗಿ ನಮ್ಮ ಎಲ್ಲ ವಿದ್ವಾಂಸರೂ ತಮ್ಮ ಸಾಮರ್ಥ್ಯವನ್ನು ಕರ್ಮಶಾಸ್ತ್ರ ಮತ್ತು ಕಾನೂನಿಗೆ ಸಂಬಂಧಿಸಿದ ವಿಷಯಗಳಿಗೆ ವ್ಯಯಿಸುತ್ತಿದ್ದಾರೆ. ಈಗ ಉದ್ಭವಿಸಿರುವ ಸಮಸ್ಯೆಯ ಬಗ್ಗೆ ಗಮನ ಹರಿಸುವುದಿಲ್ಲ.

ಮೂಲಭೂತವಾದದ ಆರೋಪದ ಬಗ್ಗೆ ವಿಶ್ಲೇಷಣೆ ನಡೆಸುವ ಮೂಲಕ ಇಸ್ಲಾಮಿನ ನೈಜ ಚಿತ್ರಣವನ್ನು ಮುಂದಿಡಲು ಈ ಪುಸ್ತಕದ ಮೂಲಕ ಪ್ರಯತ್ನಿಸಲಾಗಿದೆ. ಇಲ್ಲಿ ಯಾವುದೇ ಕಾನೂನು, ಕರ್ಮಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ ಚರ್ಚಿಸಲಾಗಿಲ್ಲ. ಆರೋಪಗಳ ಸತ್ಯಾಸತ್ಯತೆ ಬಹಿರಂಗಗೊಳಿಸುವ ಸಲುವಾಗಿ ಇಸ್ಲಾಮಿನ ಕೆಲವು ಮೂಲಭೂತ ಮೌಲ್ಯಗಳನ್ನು ಪ್ರಸ್ತುತಪಡಿಸಲಾಗಿದೆ. ಇದೇ ರೀತಿಯ ಪ್ರಯತ್ನಗಳನ್ನು ಇನ್ನಷ್ಟು ಉನ್ನತ ಸ್ತರದಲ್ಲಿ ನಡೆಸಲು ಸಾಧ್ಯವಿದೆ. ಆದರೆ, ಮುಂದಿನ ಎಲ್ಲ ಪ್ರಯತ್ನಗಳು ಇದೇ ದಿಕ್ಕಿನಲ್ಲಿ ಸಾಗಬೇಕಾಗಿದೆ. ಈ ಪುಸ್ತಕದಲ್ಲಿ ನಡೆಸಲಾಗಿರುವ ಆರೋಪಗಳ ವಿಶ್ಲೇಷಣೆ ಮೂಲಭೂತ ಸ್ವರೂಪದ್ದಾಗಿದೆ. ಇನ್ನೂ ಹಲವು ಆರೋಪಗಳ ಬಗ್ಗೆ ವಿಶ್ಲೇಷಣೆ ನಡೆಸಬಹುದಾಗಿದೆ. ಆದರೆ ಈ ಆರೋಪಗಳ ಬೆಳಕಿನಲ್ಲಿ ವಾಸ್ತವ ಚಿತ್ರಣ ಮುಂದಿಡಲು ಸಾಧ್ಯವಾದರೆ ಅಪಪ್ರಚಾರದ ಇಡೀ ಸೌಧ ಕುಸಿದು ಬೀಳುವುದರಲ್ಲಿ ಸಂಶಯವಿಲ್ಲ.

ಮುಸ್ಲಿಮರು ಮತ್ತು ಅವರ ಆಡಳಿತಗಾರರು ಹಿಂದೆ ಎಸಗಿದ ಪ್ರಮಾದಗಳ ಬಗ್ಗೆ ಆತ್ಮಾವಲೋಕನ ನಡೆಸುವ ಪ್ರಯತ್ನವನ್ನೂ ಇಲ್ಲಿ ನಡೆಸಲಾಗಿದೆ. ಕೆಲವೊಮ್ಮೆ ನಮ್ಮ ವ್ಯಾವಹಾರಿಕ ಬದುಕಿನಲ್ಲಿರುವ ತಪ್ಪುಗಳೂ ವಿರೋಧಿಗಳಿಗೆ ಅಪಪ್ರಚಾರಕ್ಕೆ ಇಳಿಯಲು ಸರಕು ಒದಗಿಸಿದೆ. ಆದರೆ ಸತ್ಯ ಯಾವಾಗಲೂ ಸತ್ಯವೇ. ಅದನ್ನು ಬಯಲುಗೊಳಿಸುವ ವಿಷಯದಲ್ಲಿ ಯಾವುದೇ ಪೂರ್ವಗ್ರಹ ಇರಕೂಡದು. ಅಲ್ಲಾಹನು ಈ ಕಿರು ಪ್ರಯತ್ನವನ್ನು ಯಶಸ್ವಿಗೊಳಿಸಲಿ.

ಡಾ. ಫಝ್ಲುರ್ರಹ್‌ಮಾನ್ ಫರೀದಿ

೧೯ ಜೂನ್ ೧೯೯೩

ಇಸ್ಲಾಮೀ ಆಂದೋಲನದ ಮೇಲೆ ಒಂದು ಹೊಸ ಆರೋಪ

ಪಶ್ಚಿಮದ ಸಾಂಸ್ಕೃತಿಕ ಮತ್ತು ವೈಚಾರಿಕ ನಾಯಕತ್ವದಲ್ಲಿ ಇಸ್ಲಾಮ್ ಮತ್ತು ಇಸ್ಲಾಮೀ ಆಂದೋಲನದ ಚಾರಿತ್ರ್ಯಹನನಕ್ಕೆ ಆಗಿಂದಾಗ್ಗೆ ವಿವಿಧ ಪಾರಿಭಾಷಿಕಗಳನ್ನು ಬಳಸಲಾಗುತ್ತಿದೆ. ಕೆಲವೊಮ್ಮೆ ಅದನ್ನು ಪ್ರತಿಗಾಮಿಯೆಂದೂ ತೀವ್ರವಾದಿಯೆಂದೂ ಆರೋಪಿಸಲಾಗಿದೆ. ಮುಸ್ಲಿಮರನ್ನು ಮತಾಂಧರ ಗುಂಪೆಂದು ಜರೆಯಲಾಗಿದೆ. ಆದರೆ ಕೆಲವು ವರ್ಷಗಳಿಂದ ಒಂದು ಹೊಸ ಮತ್ತು ವಿಶಿಷ್ಟ ಬಯ್ಗುಳ ಆರಂಭಗೊಂಡಿದೆ. ಅದುವೇ ಮೂಲಭೂತವಾದ. ಪ್ರತಿಯೊಬ್ಬ ಬುದ್ಧಿಜೀವಿಯೂ ಇಸ್ಲಾಮೀ ಆಂದೋಲನವನ್ನು ಮೂಲಭೂತವಾದಿಗಳ ಗುಂಪೆಂದು ಆರೋಪಿಸುತ್ತಾನೆ. ವ್ಯಕ್ತಿಯನ್ನು ಸಮಕಾಲೀನ ಮೌಲ್ಯಗಳಿಂದ ಸಂಪೂರ್ಣ ಮುಕ್ತಗೊಳಿಸುವಂತಹ ಅಪರಾಧವೆಂಬ ನೆಲೆಯಲ್ಲಿ ಅದನ್ನು ಪ್ರಸ್ತುತ ಪಡಿಸಲಾಗುತ್ತದೆ. ಯಾರನ್ನಾದರೂ ಮತೀಯ ಮೂಲಭೂತವಾದಿ ಎಂದು ಕರೆದರೆ ಸಾಕು. ಆತ ತನ್ನಿಂತಾನೆ ಮತಾಂಧ, ತೀವ್ರವಾದಿ, ಪ್ರತಿಗಾಮಿ ಮತ್ತು ರಕ್ತಪಿಪಾಸು ಎಂಬ ಕೀರ್ತಿಗೆ ಪಾತ್ರನಾಗಿ ಬಿಡುತ್ತಾನೆ.

ಮೂಲಭೂತವಾದದ ವ್ಯಾಖ್ಯೆ

ನಾವು ನೀವು ಬದುಕುತ್ತಿರುವುದು ಜ್ಞಾನ, ವಿಜ್ಞಾನದ ಒಂದು ವಿಚಿತ್ರ ಪ್ರಪಂಚದಲ್ಲಿ. ಸ್ವಾರಸ್ಯವೆಂದರೆ ಇಲ್ಲಿ ಜ್ಞಾನ, ವಿವೇಕದ ಹೆಸರಲ್ಲೇ ಅಜ್ಞಾನ ರಾರಾಜಿಸುತ್ತಿದೆ. ಸುದ್ದಿಗಳ ಬದಲಿಗೆ ವದಂತಿಗಳೇ ಇಲ್ಲಿ ಮೇಲುಗೈ ಸಾಧಿಸುತ್ತವೆ. ಸಂಶೋಧನೆಯ ಹೆಸರಲ್ಲಿ ಪೂರ್ವಗ್ರಹ, ಮೋಸ ಪ್ರಾಬಲ್ಯ ಪಡೆಯುತ್ತಿದೆ. ಮೂಲಭೂತವಾದದ ವ್ಯಾಖ್ಯಾನ ಏನು ಎಂಬುದನ್ನು ವಿವರಿಸುವ ವ್ಯವಧಾನ ಯಾರಿಗೂ ಇಲ್ಲ. ಕಾಲಗತಿ ಎಷ್ಟು ಕ್ಷಿಪ್ರವಾಗಿದೆಯೆಂದರೆ ನೀವು ಈ ಶಬ್ದದ ವ್ಯಾಖ್ಯಾನ ಕಂಡು ಹಿಡಿಯುವಷ್ಟರಲ್ಲಿ ನಿಮ್ಮ ಬತ್ತಳಿಕೆಯಲ್ಲಿನ ಎಲ್ಲ ಅಸ್ತ್ರಗಳೂ ಖಾಲಿಯಾಗಿ ಬಿಟ್ಟಿರುತ್ತವೆ. ಆದ್ದರಿಂದ ಒಂದು ಶಬ್ದವನ್ನು ಹಿಡಿಯಿರಿ. ಅನಂತರ ಅದಕ್ಕೆ ಅರ್ಥಗಳನ್ನು

ಆರೋಪಿಸಿ ಬಿಡಿ. ತನ್ನಿಂತಾನೆ ಅದು ತನ್ನ ಗುರಿ ಸಾಧಿಸಿಬಿಡುತ್ತದೆ. ಅನಂತರ ಪುರುಸೊತ್ತು ಸಿಕ್ಕರೆ ಅಲ್ಲಿಂದ ಇಲ್ಲಿಂದ ಕೆಲವು ಪತ್ರಿಕೆಗಳನ್ನು ತಂದು ಸಂಶೋಧನಾ ಪ್ರಬಂಧ ರೂಪಿಸಿಕೊಳ್ಳಿ. ಹಿಂದೆ ಜೀವನ ಪೂರ್ತಿ ಅಧ್ಯಯನ, ಚಿಂತನೆ ನಡೆಸಿದ ನಂತರವೇ ಇಂತಹ ಸಂಶೋಧನೆಗಳನ್ನು ರೂಪಿಸಲು ಸಾಧ್ಯವಿತ್ತು. ಆದರೆ ಇಂದು ಅದಕ್ಕೆ ಕೆಲ ಗಂಟೆಗಳ ದುಡಿಮೆಯೂ ಬೇಕಾಗಿಲ್ಲ. ಆದ್ದರಿಂದ ಆ ಬುದ್ಧಿಜೀವಿಗಳು ಮತ್ತು ಪತ್ರಕರ್ತರ ಲೇಖನಗಳಲ್ಲಿ ಮೂಲಭೂತವಾದದ ವ್ಯಾಖ್ಯೆ ಹುಡುಕುವುದು ನಿಷ್ಪ್ರಯೋಜಕ. ಅವರು ಏನು ಹೇಳುತ್ತಾರೋ ಅದನ್ನು ತೆಪ್ಪಗೆ ಸ್ವೀಕರಿಸಿ. ಇಲ್ಲದಿದ್ದರೆ ನೀವೇ ಅವರ ಆಕ್ರಮಣಕ್ಕೆ ಸಿಲುಕಿ ಬಿಡುತ್ತೀರಿ.

ಮೂಲಭೂತವಾದ ಕೇವಲ ಇಸ್ಲಾಮ್‌ಗೆ ಸೀಮಿತವೇ?

ಮೂಲಭೂತವಾದದ ಆರೋಪವನ್ನು ಕೇವಲ ಇಸ್ಲಾಮಿಗಷ್ಟೆ ಸೀಮಿತಗೊಳಿಸುವವರೂ ಇದ್ದಾರೆ. ಅವರ ದೃಷ್ಟಿಯಲ್ಲಿ ಬೇರಾರೂ ಮೂಲಭೂತವಾದಿಗಳಾಗಲು ಸಾಧ್ಯವೇ ಇಲ್ಲ. ಅವರು ಎಂತಹ ಉಗ್ರ ಮತಾಂಧರೂ ಪ್ರತಿಗಾಮಿಗಳೂ ಆಗಿರಬಹುದು. ನಮ್ಮ ಕೆಲವು ಬುದ್ಧಿಜೀವಿಗಳು, ಅದರಲ್ಲೂ ಗಿರಿಲಾಲ್ ಜೈನ್‌ರಂತಹ ಪತ್ರಕರ್ತರವಾದ ತುಂಬಾ ಸ್ವಾರಸ್ಯಕರ. ಹಿಂದೂಗಳು ಎಂದೂ ಮೂಲಭೂತವಾದಿಗಳಾಗಲು ಸಾಧ್ಯವಿಲ್ಲ ಎಂಬುದು ಅವರ ವಾದ. ಹಾಗಿರುವಾಗ ರಂಗದಲ್ಲಿ ಉಳಿಯುವ ಧರ್ಮ ಇಸ್ಲಾಮ್ ಮಾತ್ರ. ಇತ್ತೀಚಿಗೆ ಪತ್ರಕರ್ತ ಹಾಗೂ ಚಿಂತಕರೊಬ್ಬರು ಬರೆದ ಟಿಪ್ಪಣಿ ಗಮನಿಸಿ: "ಮೂಲಭೂತವಾದ ಎಂಬುದು ಇಸ್ಲಾಮ್ ಧರ್ಮಕ್ಕಾಗಲೀ ಮುಸ್ಲಿಮರಿಗಾಗಲೀ ಅನಂತರ ಅಂಟಿಕೊಂಡ ರೋಗವಲ್ಲ. ಅದು ಇಸ್ಲಾಮಿನ ಸ್ವಭಾವದಲ್ಲೇ ಇದೆ. ಇಸ್ಲಾಮಿನ ಮೂಲಭೂತ ಕಲ್ಪನೆಗಳ ವಿರುದ್ಧ ಯುದ್ಧ ನಡೆಸಿದಾಗ ಮಾತ್ರ ಈ ಸಮಸ್ಯೆ ಬಗೆಹರಿಯಲು ಸಾಧ್ಯ."

ಉದ್ದೇಶ ಮತ್ತು ಪ್ರೇರಣೆಗಳು

ಮೂಲಭೂತವಾದದ ಆರೋಪ ಹೊರಿಸುವ ಕೆಲವು ಬುದ್ಧಿಜೀವಿಗಳ ಬೌದ್ಧಿಕ ತರಬೇತಿ ಮಾರ್ಕ್ಸಿಸ್ಟ್ ಶಾಲೆಗಳ ಮೂಲಕ ನಡೆದಿದೆ. ಅವರ ನಿರೀಕ್ಷೆಗಳು, ಕನಸುಗಳೆಲ್ಲವೂ ಸಂಪೂರ್ಣ ನುಚ್ಚು ನೂರಾಗಿ ಬಿಟ್ಟಿವೆ. ಎಲ್ಲಿಯವರೆಗೆ ಅವರ ಕಿಬ್ಲಾ (ಮಾಸ್ಕೋದಲ್ಲಿ ಕಮ್ಯೂನಿಸ್ಟ್ ಆಡಳಿತ) ಜೀವಂತವಿತ್ತೋ ಅಲ್ಲಿಯವರೆಗೆ ಅವರು ಮಾರ್ಕ್ಸಿಸಮ್ ಕೂಡಾ ಒಂದು ರೀತಿಯಲ್ಲಿ ಮೂಲಭೂತವಾದವೇ ಎಂಬುದನ್ನು

ಮರೆತಿದ್ದರು. ಮಾರ್ಕ್ಸಿಸಂ ಕೂಡಾ ಒಬ್ಬ ವ್ಯಕ್ತಿಯ ಜೀವನದರ್ಶನದ ಮೇಲೆ ನಿಂತಿರುವ ವಿಚಾರಧಾರೆ. ಅವರ ಪ್ರಕಾರ ಬಂಡವಾಳಶಾಹಿತ್ವ ಅತ್ಯಂತ ಅನೈತಿಕ ಮತ್ತು ಮಾರ್ಗಭ್ರಷ್ಟ ವ್ಯವಸ್ಥೆ. ಧರ್ಮ ಮತ್ತು ಧಾರ್ಮಿಕ ಮೌಲ್ಯಗಳೆಲ್ಲವೂ ಅವರ ದೃಷ್ಟಿಯಲ್ಲಿ ಕಿರಾತ ಮತ್ತು ಪ್ರತಿಗಾಮಿ. ಅವರ ಕನಸಿನ ಸೌಧ ಕುಸಿದು ಬಿದ್ದ ನಂತರ ಅವರಿಗೆ ಇಸ್ಲಾಮ್ ಅತಿ ದೊಡ್ಡ ಮೂಲಭೂತವಾದಿ ಧರ್ಮವಾಗಿ ಕಾಣಿಸುತ್ತಿದೆ. ಉದಾರವಾದದ ಈ ಹೊಸ ಗುತ್ತೇದಾರರು ಅತ್ಯಂತ ನಿರ್ಲಜ್ಜ ರೀತಿಯಲ್ಲಿ ಆರೋಪಗಳನ್ನು ಹೊರಿಸುತ್ತಿದ್ದಾರೆ. ಹಿಂದೊಮ್ಮೆ ಇವರು ಈ ಆರೋಪವನ್ನು ನಿರಾಕರಿಸುತ್ತಲೇ ತಮ್ಮ ಜೀವನ ಸವೆದಿದ್ದರೆಂಬುದನ್ನು ಸುಲಭದಲ್ಲೇ ಮರೆತು ಬಿಟ್ಟಿದ್ದಾರೆ. ಈ ಬಡಪಾಯಿಗಳ ಸಮಸ್ಯೆಯೆಂದರೆ ಇದು ಅವರ ಮಟ್ಟಿಗೆ ಸಾವು ಬದುಕಿನ ಪ್ರಶ್ನೆ. ಹೀಗೆ ಮಾಡದಿದ್ದರೆ ಅವರು ತಮ್ಮ ಒಡೆದ ಮನಸ್ಸಿಗೆ ಸಮಾಧಾನ ತಂದುಕೊಳ್ಳುವುದಾದರೂ ಹೇಗೆ? ತಾವು ಕಂಡಿದ್ದ ಕನಸನ್ನು ಸಾಕಾರ ಗೊಳಿಸುವುದು ಹೇಗೆ ಎಂಬುದು ಅವರ ಚಿಂತೆ.

ಸಮತಾವಾದದ ಒಲವುಳ್ಳ ಈ ಬುದ್ಧಿಜೀವಿಗಳ ಜತೆಗೆ ಇಸ್ಲಾಮ್ ಎಂಬ ಹೆಸರನ್ನೇ ದ್ವೇಷಿಸುವ ಕೆಲವು ಚಿಂತಕರೂ ಸೇರಿಕೊಂಡಿದ್ದಾರೆ. ಇಸ್ಲಾಮ್ ಒಂದು ಹೊಸ ಶಕ್ತಿಯಾಗಿ ಹೊರಬಂದಿರುವುದು ಅವರ ನಿದ್ದೆ ಹಾಳು ಮಾಡಿ ಬಿಟ್ಟಿದೆ. ಇಸ್ಲಾಮಿ ಆಂದೋಲನ ಜನರ ಮನಸ್ಸುಗಳಲ್ಲಿ ಪರಿವರ್ತನೆ ಸೃಷ್ಟಿಸಿರುವುದನ್ನು ಕಂಡು ಇವರು ದಂಗಾಗಿ ಹೋಗಿದ್ದಾರೆ. ಇಸ್ಲಾಮಿನ ಶಕ್ತಿಶಾಲಿ ವಿಚಾರಧಾರೆ ಯಾವ ರೀತಿಯಲ್ಲೂ ಸೋಲೊಪ್ಪುವ ಜಾಯಮಾನದ್ದಲ್ಲ. ಆದ್ದರಿಂದ ಅವರು ಇಸ್ಲಾಮಿನ ಮೇಲೆ ನೇರ ಆಕ್ರಮಣ ನಡೆಸಲು ೧೯ನೆಯ ಶತಮಾನದ ಬುದ್ಧಿಜೀವಿಗಳು ಮುಂದಿಟ್ಟ ಹಳಸಲು ಆರೋಪಗಳನ್ನು ಹೊಸ ಶೈಲಿಯಲ್ಲಿ ಮುಂದಿಡುತ್ತಿದ್ದಾರೆ. ಒಂದು ವೇಳೆ ಇವರು ಪ್ರಾಮಾಣಿಕರಾಗಿದ್ದರೆ ಮುಸ್ಲಿಮರು ಮುಂದಿಡುವ ಸಾಕ್ಷ್ಯಗಳನ್ನೂ ಉತ್ತರಗಳನ್ನೂ ತಾಳ್ಮೆಯಿಂದ ಆಲಿಸುತ್ತಿದ್ದರು. ಶಾಬಾನು ಪ್ರಕರಣದ ಸಂದರ್ಭದಲ್ಲಿ 'ಇಲ್ಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯಲ್ಲಿ ಅರುಣ್ ಶೌರಿ ಮಾಡಿದ ಸಂಶೋಧನೆ ಇದಕ್ಕೊಂದು ಉತ್ತಮ ಉದಾಹರಣೆ. ಅವರು ಪಾಶ್ಚಾತ್ಯರ ಸಂಶೋಧನೆಗಳನ್ನು ಬಳಸಿ ತಾನು ಇಸ್ಲಾಮಿನ ಎಲ್ಲ ವಾದಗಳನ್ನೂ ಸಂಪೂರ್ಣ ನುಚ್ಚುನೂರು ಮಾಡಿದೆನೆಂದು ತಿಳಿದು ಕೊಂಡರು. ಸ್ವಾರಸ್ಯವೆಂದರೆ ಮೂಲಭೂತವಾದ ಮತ್ತು ಮತಾಂಧತೆಯ ಆರೋಪ ಹೊರಿಸುವವರು ಸ್ವತಃ ಫ್ಯಾಸಿಸಂನ ವಕ್ತಾರರಾಗಿದ್ದಾರೆ.

ಮಾತ್ರವಲ್ಲ, ಅವರ ಸಾಂಸ್ಕೃತಿಕ ಬಂಡವಾಳ ಪ್ರಾಚೀನ ಆಚಾರ-ವಿಚಾರಗಳು ಮತ್ತು ದಂತಕತೆಗಳನ್ನು ನೆಚ್ಚಿಕೊಂಡಿದೆ.

ಮೂಲಭೂತವಾದದ ಆರೋಪ ಹೊರಿಸುವ ನಾಯಕರು ಬಂಡವಾಳಶಾಹಿ ಸಂಸ್ಕೃತಿಯ ಪ್ರತಿನಿಧಿಗಳಾಗಿದ್ದಾರೆ. ಇವರ ಮುಂದೆ ಎರಡು ಉದ್ದೇಶಗಳಿವೆ. ಮೊದಲನೆಯದಾಗಿ ಇವರು ಯಾವುದೇ ಮಿತಿಯಿಲ್ಲದ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಾರೆ. ಸ್ವಾತಂತ್ರ್ಯದ ಮೇಲೆ ಯಾವುದೇ ನೈತಿಕ ನಿರ್ಬಂಧ ಇರಕೂಡದೆಂಬುದು ಇವರ ವಾದ. ಸ್ವೇಚ್ಛಾಚಾರವೇ ಬಂಡವಾಳಶಾಹಿ ಸಂಸ್ಕೃತಿಯ ಅಡಿಪಾಯ. ಬದುಕಿನ ಎಲ್ಲಾ ರಂಗಗಳಲ್ಲೂ ಈ ಸ್ವೇಚ್ಛಾಚಾರವನ್ನು ಇವರು ಬಯಸುತ್ತಾರೆ. ಈ ಸ್ವಾತಂತ್ರ್ಯದ ಸವಿ ಮತ್ತು ವೈಭವವನ್ನು ಅದಾಗಲೇ ಇವರು ಅನುಭವಿಸಿಯಾಗಿದೆ. ಆದ್ದರಿಂದ ಅವರು ಯಾವುದೇ ಕಾರಣಕ್ಕೂ ಅದನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಅದರ ಭೌತಿಕ ಲಾಭಗಳೂ ಅದ್ಭುತವಾಗಿವೆ. ಮಾತ್ರವಲ್ಲ ಎಲ್ಲೆಡೆಯೂ ಅದು ಗೋಚರಿಸುತ್ತದೆ. ಅದೇ ವೇಳೆ ಅದರ ದುಷ್ಪರಿಣಾಮಗಳನ್ನು ಜನಸಾಮಾನ್ಯರು ಅನುಭವಿಸಬೇಕಾಗಿದೆ. ಯಾಕೆಂದರೆ ಅವರ ಬಳಿ ಮಾತಿನ ಅಥವಾ ಬರಹದ ಶಕ್ತಿಯಿಲ್ಲ. ಹೆಚ್ಚೆಂದರೆ ಅವರು ಆ ಬಗ್ಗೆ ಹಲುಬುತ್ತಾ ಸುಮ್ಮನಾಗಬೇಕು. ಅದನ್ನು ಸ್ಪಷ್ಟವಾಗಿ ಹೇಳಲೂ ಅವರಿಗೆ ಸಾಧ್ಯವಾಗುವುದಿಲ್ಲ.

ಈ ಸಂಸ್ಕೃತಿಯ ನೈತಿಕ ದುಷ್ಪರಿಣಾಮಗಳು ಶೀಘ್ರದಲ್ಲೇ ಗೋಚರಿಸುವಂತಹದ್ದಲ್ಲ. ಒಂದು ವೇಳೆ ಗೋಚರವಾದರೂ ಅದಕ್ಕೆ ವೈಜ್ಞಾನಿಕ ಸಮರ್ಥನೆಗಳನ್ನು ಕಂಡುಕೊಳ್ಳಲಾಗುತ್ತದೆ. ಇದು ಎಷ್ಟು ಹಿತವಾದ ಸ್ವಾತಂತ್ರ್ಯವೆಂದರೆ ಶ್ರೀಮಂತರು, ಅಧಿಕಾರಸ್ಥರು, ನಾಯಕರು ಹಾಗೂ ಅವರ ಹಿಂಬಾಲಕರಿಗೆ ಅದನ್ನು ತೊರೆಯುವುದು ಸುತರಾಂ ಇಷ್ಟವಿಲ್ಲ. ಆದರೆ ಇಸ್ಲಾಮ್ ಮನುಷ್ಯರು ಮತ್ತು ಜಾನುವಾರುಗಳ ಸ್ವಾತಂತ್ರ್ಯದ ಮಧ್ಯೆ ವ್ಯತ್ಯಾಸವಿದೆ ಎನ್ನುತ್ತದೆ. ಮನುಷ್ಯನ ಸ್ವಾತಂತ್ರ್ಯ ನೈತಿಕ ಮಿತಿ ಮೇರೆಗಳಿಗೆ ಬದ್ಧವಾದದ್ದೆಂದು ಘೋಷಿಸುತ್ತದೆ. ಅಮಿತ ಸ್ವಾತಂತ್ರ್ಯದ ವಕ್ತಾರರು ಮನುಷ್ಯನಿಗೆ ಯಾವುದೇ ನೈತಿಕ ಕಟ್ಟುಪಾಡುಗಳ ಅಗತ್ಯವಿಲ್ಲ ಎಂದು ಧೈರ್ಯವಾಗಿ ಹೇಳುವಂತೆಯೂ ಇಲ್ಲ. ಆದ್ದರಿಂದ ಅವರು ಇಸ್ಲಾಮ್ ಮೂಲಭೂತವಾದದ ಮೇಲೆ ನಿಂತ ಧರ್ಮ ಎಂದು ತಗಾದೆ ತೆಗೆಯುತ್ತಾರೆ. ಮನುಷ್ಯರನ್ನು ಸಂಕುಚಿತ ಮತಿಗಳನ್ನಾಗಿಯೂ ಅನ್ಯ ವಿಚಾರಧಾರೆಯ ಜನರ ಬಗ್ಗೆ ಅಸಹಿಷ್ಣುಗಳನ್ನಾಗಿಯೂ ಪರಿವರ್ತಿಸುತ್ತದೆ ಎಂಬುದು ಇವರ ವಾದ.

ಸಮತಾವಾದದ ಸ್ಥಾನದಲ್ಲಿ ಒಂದು ಹೊಸ ವೈರಿಯ ಶೋಧನೆ ಈ ಅಭಿಯಾನದ ಇನ್ನೊಂದು ಉದ್ದೇಶ. ಪಾಶ್ಚಾತ್ಯ ನಾಗರಿಕತೆ, ಅದರಲ್ಲೂ ವಿಶೇಷವಾಗಿ ಅಮೇರಿಕ, ಬಹಳ ಕಾಲದವರೆಗೂ ರಷ್ಯಾವನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ನೀತಿಗಳನ್ನು ರೂಪಿಸುತ್ತಾ ಬಂದಿದೆ. ಆದರೆ ಈಗ ಆ ಶತ್ರು ನೆಲಕಚ್ಚಿ ಹೋಗಿದೆ. ಈ ಹಿನ್ನೆಲೆಯಲ್ಲಿ ಹೊಸ ಶತ್ರುವನ್ನು ಹುಡುಕುವುದು ಮತ್ತು ಆ ಕುರಿತು ಭೀತಿ ಹರಡುವುದು ಅಮೇರಿಕದ ತಂತ್ರ. ಇದು ಅವರ ಆರ್ಥಿಕ ಅಗತ್ಯವೂ ಹೌದು. ಅಮೇರಿಕದ ರಾಷ್ಟ್ರೀಯ ಆದಾಯದ ಮೂರನೇ ಒಂದು ಭಾಗ ಶಸ್ತ್ರಾಸ್ತ್ರಗಳ ಮಾರಾಟದಿಂದ ಬರುವಂತಹದ್ದು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಶಸ್ತ್ರಾಸ್ತ್ರ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸುವುದು ಅದರ ಮುಖ್ಯ ಕಸುಬು. ಒಂದು ವೇಳೆ ಜಗತ್ತು ಶಾಂತಿ, ಸಮಾಧಾನದ ತಾಣವಾಗಿ ಮಾರ್ಪಟ್ಟರೆ ಈ ಬಿಲಿಯಗಟ್ಟಲೆ ಬಂಡವಾಳದ ಉದ್ದಿಮೆ ಸಂಪೂರ್ಣ ನೆಲಕಚ್ಚಲಾರದೇ?

ಹಿಂದೆ ತೃತೀಯ ವಿಶ್ವದ ರಾಷ್ಟ್ರಗಳಿಗೆ ರಷ್ಯಾ ಎಂಬ ಬೆದರುಗೊಂಬೆಯನ್ನು ತೋರಿಸಿ ಶಸ್ತ್ರ ಖರೀದಿಗೆ ಅವರನ್ನು ಹುರಿದುಂಬಿಸಲಾಗುತ್ತಿತ್ತು. ಮಾತ್ರವಲ್ಲ, ಆ ಬಡ ರಾಷ್ಟ್ರಗಳ ಪೈಕಿ ಒಂದನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟಲಾಗುತ್ತಿತ್ತು. ಇಂದು ಕೂಡಾ ಪಶ್ಚಿಮ ಏಷ್ಯಾದ ದೂರದರ್ಶಿತ್ವವಿಲ್ಲದ ನಾಯಕರು ಅಮೇರಿಕದಿಂದ ಶಸ್ತ್ರಾಸ್ತ್ರ ಖರೀದಿಗೆ ಪೈಪೋಟಿ ನಡೆಸುತ್ತಿದ್ದಾರೆ. ಇದರ ಪರಿಣಾಮವಾಗಿ ಇರಾನ್‌ಗೆ ಇರಾಕ್ ಎಂದರೆ ಭಯ. ಇವೆರಡೂ ರಾಷ್ಟ್ರಗಳಿಗೆ ಸಿರಿಯಾ ಎಂದರೆ ಭೀತಿ. ಸೌದಿ ಅರೇಬಿಯಾ ವಂತೂ ಎಲ್ಲ ನೆರೆ ರಾಷ್ಟ್ರಗಳ ಬಗ್ಗೆಯೂ ಅನುಮಾನ ಮತ್ತು ಭೀತಿಯಿಂದ ಥರಗುಟ್ಟುತ್ತಿದೆ. 'ನ್ಯೂಸ್‌ವೀಕ್' ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟವಾದ ಒಂದು ವರದಿಯ ಪ್ರಕಾರ ಈ ಎಲ್ಲ ರಾಷ್ಟ್ರಗಳೂ ಗಲ್ಫ್ ಯುದ್ಧದ ನಂತರ ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ಮುಳುಗಿವೆ.

ಇಸ್ಲಾಮಿ ಮೂಲಭೂತವಾದದ ಈ ಅಪಾಯ ದುರದೃಷ್ಟವಶಾತ್, ಭಾರತ ವನ್ನೂ ಒಂದು ಕ್ಷಣ ತಬ್ಬಿಬ್ಬುಗೊಳ್ಳುವಂತೆ ಮಾಡುತ್ತದೆ. ಆದ್ದರಿಂದ ಅಮೇರಿಕದ ಸೆನೆಟರ್ ಬ್ರಿಲ್ಸ್‌ಪರ್ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದಾಗ ಈ ಪರಿಸ್ಥಿತಿಯನ್ನು ಚೆನ್ನಾಗಿ ಉಪಯೋಗಿಸಿಕೊಂಡರು. ಭಾರತದ ಹಿರಿಯ ನಾಯಕರಿಗೆ ಇಸ್ಲಾಮಿ ಮೂಲಭೂತವಾದದ ಅಪಾಯಗಳ ಬಗ್ಗೆ ವಿವರವಾಗಿ ತಿಳಿಸಿದರು. ಅಲ್ಜೀರಿಯ, ಅಫ್ಘಾನಿಸ್ತಾನ, ಪಶ್ಚಿಮ ಏಷ್ಯಾ ಎಲ್ಲವೂ ಇಸ್ಲಾಮಿ ಮೂಲಭೂತವಾದದ ತೆಕ್ಕೆಗೆ

ಸರಿಯುತ್ತಿದೆ ಎಂಬ ಎಚ್ಚರಿಕೆಯನ್ನು ಅವರು ನೀಡಿದರು. ಅಮೇರಿಕ ಮತ್ತು ಐರೋಪ್ಯ ರಾಷ್ಟ್ರಗಳ ಶಸ್ತ್ರ ಮಾರಾಟ ದಂಧೆಯನ್ನು ಮತ್ತಷ್ಟು ಬಿರುಸುಗೊಳಿಸುವುದು ಇದರ ಉದ್ದೇಶ ಎಂಬುದನ್ನು ಅರ್ಥ ಮಾಡಲು ಹೆಚ್ಚಿನ ಬುದ್ಧಿವಂತಿಕೆಯೇನೂ ಬೇಕಾಗಿಲ್ಲ. ಆದರೆ ಇವರು ಸರಳ ವಾಸ್ತವಿಕತೆಯೊಂದನ್ನು ಮರೆತುಬಿಟ್ಟಿದ್ದಾರೆ. ನೆರೆಯ ಮುಸ್ಲಿಮ್ ರಾಷ್ಟ್ರಗಳು ಇಂದು ಯಾವ ರೀತಿಯಲ್ಲಿ ಕಚ್ಚಾಟ ನಡೆಸುತ್ತಿವೆಯೆಂದರೆ ಇವರನ್ನು ದುರ್ಬಲಗೊಳಿಸಲು ಬಾಹ್ಯ ಶಕ್ತಿಯ ಅವಶ್ಯಕತೆಯೇ ಇಲ್ಲವೇನೋ ಅನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅವು ಭಾರತದ ಮಟ್ಟಿಗೆ ಗಂಡಾಂತರವಾಗಿ ಮಾರ್ಪಡುವುದು ಹೇಗೆ ತಾನೆ ಸಾಧ್ಯ?

ಇನ್ನು ಮಧ್ಯ ಏಷಿಯಾದ ವಿಷಯಕ್ಕೆ ಬರೋಣ. ಈ ರಾಷ್ಟ್ರಗಳಲ್ಲಿ ಬೃಹತ್ ಸಂಖ್ಯೆಯ ಮುಸ್ಲಿಮರಿದ್ದಾರೆಂಬುದು ನಿಜ. ಆದರೆ ಇವರು ಬಹಳ ಕಾಲದ ಶೋಷಣೆಯ ನಂತರ ಝಿಯೋನಿಸ್ಟ್ ಮತ್ತು ಅಮೇರಿಕದ ಹಿಡಿತದಿಂದ ಇತ್ತೀಚೆಗಷ್ಟೆ ಸ್ವಾತಂತ್ರ್ಯ ಪಡೆದವರು. ಇನ್ನೂ ತಮ್ಮ ಕಾಲ ಮೇಲೆ ನಿಲ್ಲುವಂತಹ ತ್ರಾಣ ಇವರಿಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಭಾರತದಂತಹ ಬೃಹತ್ ರಾಷ್ಟ್ರಕ್ಕೆ ಇವರು ಗಂಡಾಂತರವಾಗಲು ಸಾಧ್ಯವೇ ಎಂಬುದನ್ನು ನಾವು ಯೋಚಿಸಬೇಕಾಗಿದೆ. ನಮ್ಮ ಬುದ್ಧಿಜೀವಿಗಳ ಧೋರಣೆಯಂತೂ ತೀರಾ ವಿಚಿತ್ರವಾಗಿದೆ. ತಾವು ಪಾಶ್ಚಾತ್ಯ ಪ್ರಭಾವಗಳಿಂದ ಸಂಪೂರ್ಣ ಮುಕ್ತರೆಂದು ಅವರು ಹೇಳಿಕೊಳ್ಳುತ್ತಾರೆ. ಆದರೆ ವಾಸ್ತವದಲ್ಲಿ ಇವರು ಪಶ್ಚಿಮದ ಮಾಧ್ಯಮಗಳಲ್ಲಿ ಬರುವ ಅನಿಸಿಕೆಗಳನ್ನೇ ಪವಿತ್ರ ವಾಕ್ಯಗಳೆಂಬಂತೆ ಸ್ವೀಕರಿಸುತ್ತಾರೆ. ಪಾಶ್ಚಾತ್ಯರ ತಂಗಳನ್ನ ತಿಂದು ಇವರು ತಮ್ಮ ಮಾನಸಿಕ ಸ್ಥಿರತೆಯನ್ನು ಸಂಪೂರ್ಣ ಕಳೆದುಕೊಂಡಿದ್ದಾರೆ.

ಮೂಲಭೂತವಾದ ಅಪರಾಧವೇ?

ಇಂತಹ ಪರಿಸ್ಥಿತಿಯಲ್ಲಿ ಮೂಲಭೂತವಾದದ ನೈಜ ಅರ್ಥ ಮತ್ತು ವ್ಯಾಖ್ಯಾನದ ಶೋಧಕ್ಕೆ ಇಳಿಯುವುದೇ ನಿಷ್ಪ್ರಯೋಜಕವಾಗಿ ಬಿಡುತ್ತದೆ. ಯಾಕೆಂದರೆ ಇವರು ಅದಾಗಲೇ ಮೂಲಭೂತವಾದ ಒಂದು ಅಪರಾಧ ಎಂಬ ತೀರ್ಮಾನಕ್ಕೆ ಬಂದಾಗಿದೆ. ಆದ್ದರಿಂದ ಮೂಲಭೂತವಾದದಲ್ಲಿ ತೊಡಗುವ ವ್ಯಕ್ತಿ ಅಥವಾ ಗುಂಪು ಎಲ್ಲ ರೀತಿಯ ಅಪರಾಧಗಳಲ್ಲಿ ತೊಡಗುವವರು. ಮಾತ್ರವಲ್ಲ ಅಂತಹ ಪಾತಕ ಕೃತ್ಯಗಳನ್ನು ಬೆಂಬಲಿಸುವವರು ಎಂಬುದು ಇವರ ವಾದ. ಮೂಲಭೂತವಾದಿಗಳೆಂದ ತಕ್ಷಣ ಅವರು

ಯಾವುದಾದರೂ ಒಂದು ಗ್ರಂಥ ಅಥವಾ ವ್ಯಕ್ತಿಯ ಮಾತುಗಳನ್ನು ಹಾಗೂ ಅದು ಒಳಗೊಂಡಿರುವ ಮೌಲ್ಯ ಮತ್ತು ಜೀವನ ದೃಷ್ಟಿಯನ್ನು ಅಂತಿಮ ವಾಕ್ಯವೆಂದು ನಂಬುವವರು ಎಂದೇ ಅರ್ಥ. ಅವರು ಬದಲಾಗುತ್ತಿರುವ ಸನ್ನಿವೇಶಗಳ ಬಗ್ಗೆ ಎಂದೂ ತಲೆಕೆಡಿಸಿಕೊಂಡವರಲ್ಲ. ಜ್ಞಾನ, ಅನುಭವ, ಸಂಶೋಧನೆಗಳಿಗೆ ಇವರ ದೃಷ್ಟಿಯಲ್ಲಿ ಯಾವ ಬೆಲೆಯೂ ಇಲ್ಲ.

ಇಸ್ಲಾಮಿನ ವಾಸ್ತವಿಕತೆ

ಇಸ್ಲಾಮ್ ಕೆಲವು ವಿಚಾರಧಾರೆಗಳು, ನಂಬಿಕೆಗಳು, ಶಾಶ್ವತವಾದ ಕೆಲವು ಮೌಲ್ಯ ಮತ್ತು ನೀತಿಗಳ ಮೇಲೆ ನಿಂತಿರುವ ಒಂದು ಧರ್ಮ. ಈ ನಂಬಿಕೆ ಮತ್ತು ಮೌಲ್ಯಗಳ ಆಧಾರದಲ್ಲಿ ಅದು ವ್ಯಕ್ತಿಯ ಚಾರಿತ್ರ್ಯವನ್ನು ರೂಪಿಸಬಯಸುತ್ತದೆ. ಮಾತ್ರವಲ್ಲ ಇದೇ ಆಧಾರದಲ್ಲಿ ಅದು ಸಮಾಜವನ್ನು ನಿರ್ಮಿಸ ಬಯಸುತ್ತದೆ. ಈ ಶಾಶ್ವತ ಮೌಲ್ಯಗಳ ಮಿತಿಯೊಳಗೆ ಮನುಷ್ಯನಿಗೆ ವಿಚಾರ ಮತ್ತು ಆಚಾರದ ಸ್ವಾತಂತ್ರ್ಯವನ್ನು ಇಸ್ಲಾಮ್ ನೀಡುತ್ತದೆ. ಮುಸ್ಲಿಮರ ಮಟ್ಟಿಗೆ ಈ ಮೌಲ್ಯ ಮತ್ತು ನಂಬಿಕೆಗಳು ಬರೇ ಅಭಿಮಾನದ ವಿಷಯವಲ್ಲ. ಒಬ್ಬ ವ್ಯಕ್ತಿ ಮುಸ್ಲಿಮ್ ಎಂದು ಕರೆಸಿಕೊಳ್ಳಬೇಕಾದರೆ ಇವುಗಳ ಪಾಲನೆ ಅಗತ್ಯ. ಆದ್ದರಿಂದ ಇಷ್ಟರ ಮಟ್ಟಿಗೆ ಆತ ಮೂಲಭೂತವಾದಿ ಎಂಬುದು ಸರಿಯೇ. ಯಾಕೆಂದರೆ ಇವುಗಳನ್ನು ಕೈಬಿಟ್ಟರೆ ಆತ ಮುಸ್ಲಿಮ್ ಎಂದು ಎನಿಸಿಕೊಳ್ಳಲಾರ. ಹಾಗಾಗಿ ಮುಸ್ಲಿಮರು ಮೂಲಭೂತ ನಂಬಿಕೆ ಮತ್ತು ಮೌಲ್ಯಗಳಿಗೆ ನಿಷ್ಠರಾಗುವುದಕ್ಕೆ ಮುಲ್ಲಾಗಳು ಮತ್ತು ಕಟ್ಟರ್ ಪಂಥಿಗಳ ಭೀತಿಯೇ ಕಾರಣ ಎಂದು ಯಾರಾದರೂ ಭಾವಿಸಿದ್ದರೆ ಅದನ್ನು ತೊರೆಯುವುದು ಒಳ್ಳೆಯದು. ಯಾರು ಈ ಮೌಲ್ಯಗಳನ್ನು ತೊರೆದು ಜೀವನ ಸಾಗಿಸುತ್ತಾರೋ ಅವರ ಬಗ್ಗೆ ಕುರ್‌ಆನ್ ಹೀಗೆನ್ನುತ್ತದೆ: ಅವರು ಎಲ್ಲ ಕಣಿವೆಗಳಲ್ಲೂ ಪ್ರಯಾಣಿಸುತ್ತಾರೆ.

ಯಾರು ನೀತಿ ನಿಯಮಗಳಿಲ್ಲದ ಬದುಕು ಸಾಗಿಸುತ್ತಾರೋ ಅವರನ್ನು ಕುರ್‌ಆನ್ ಜಾನುವಾರುಗಳಿಗೆ ಹೋಲಿಸುತ್ತದೆ. "ಆದುದರಿಂದ ಅವನ ಪರಿಸ್ಥಿತಿ ನಾಯಿಯಂತಾಯಿತು. ನೀವು ಅದರ ಮೇಲೆ ದಾಳಿ ಮಾಡಿದರೂ ಅದು ನಾಲಗೆ ಹೊರಚಾಚಿಕೊಂಡಿರುವುದು. ಅದನ್ನು ಬಿಟ್ಟುಬಿಟ್ಟರೂ ಅದು ನಾಲಗೆ ಹೊರಚಾಚಿ ಕೊಂಡಿರುವುದು"

(ಅಲ್ ಅಲ್‌ರಾಫ್: 176)

ದೈವಿಕ ಬೋಧನೆಗಳನ್ನೂ ಸಾಕ್ಷ್ಯಗಳನ್ನೂ ಧಿಕ್ಕರಿಸಿ ಸ್ವೇಚ್ಛಾಚಾರದ ಬದುಕು ಸಾಗಿಸುವವರ ಬಗ್ಗೆ ಕುರ್‌ಆನ್ ಹೀಗೆನ್ನುತ್ತದೆ-

"ಅವರು ಕಿವುಡರೂ, ಮೂಕರೂ ಆಗಿದ್ದಾರೆ. ಅವರು ಚಿಂತಿಸುವುದಿಲ್ಲ."

ಯಾವುದೇ ಮಿತಿ ಮೇರೆಗಳಿಲ್ಲದ ಸ್ವಾತಂತ್ರ್ಯ ಬಯಸುವವರನ್ನು ಅಜ್ಞಾನಿಗಳೆಂದು ಮಾತ್ರವಲ್ಲ, ಅಕ್ರಮಿಗಳೆಂದೂ ಕುರ್‌ಆನ್ ಹೇಳುತ್ತದೆ.

ಕುರ್‌ಆನ್ ಹೇಳುವಂತೆ ಏಕದೇವತ್ವ, ಪ್ರವಾದಿತ್ವ ಮತ್ತು ಪರಲೋಕ ಜೀವನದ ಮೇಲಿನ ನಂಬಿಕೆ ಮುಸ್ಲಿಮರ ಅನನ್ಯತೆಯಾಗಿದೆ. ನಂಬಿಕೆಗಳಷ್ಟೇ ಅಲ್ಲ, ವ್ಯಾವಹಾರಿಕ ಬದುಕನ್ನೂ ಅಲ್ಲಾಹ್ ಮತ್ತು ಪ್ರವಾದಿಯ ಮಾತುಗಳಂತೆ ರೂಪಿಸಿಕೊಳ್ಳಬೇಕು.

ಮುಸ್ಲಿಮರ ಅನನ್ಯತೆಯ ನಿರ್ಧಾರ ಭೌಗೋಳಿಕ ಮಿತಿಗಳ ಆಧಾರದಲ್ಲಿ ನಡೆಸಲಾಗುವುದಿಲ್ಲ. ಅದೇ ರೀತಿ ಯಾವುದೇ ಕುಟುಂಬ, ಗೋತ್ರದೊಂದಿಗೆ ಹೊಂದಿರುವ ಸಂಬಂಧ ಮುಸ್ಲಿಮ್ ಎಂಬ ಅನನ್ಯತೆಗೆ ಅನ್ವಯಿಸುವುದಿಲ್ಲ. ನಿರ್ದಿಷ್ಟವಾದ ಒಂದು ವಿಚಾರಧಾರೆಗೆ ಬದ್ಧರಾಗಿರುವವರನ್ನು ಮಾತ್ರ ಮುಸ್ಲಿಮ್ ಎಂದು ಹೇಳಲು ಸಾಧ್ಯ. ಒಂದು ವೇಳೆ ಈ ಮೂಲಭೂತ ವಿಚಾರಧಾರೆಯನ್ನು ಯಾರಾದರೂ ತಿರಸ್ಕರಿಸಿದರೆ ಆತ ತನ್ನನ್ನು ಬೇರೆ ಯಾವ ಹೆಸರಿನಿಂದಲಾದರೂ ಗುರುತಿಸಿಕೊಳ್ಳಬಹುದು. ಆದರೆ ಮುಸ್ಲಿಮ್ ಎಂದು ಹೇಳಿಕೊಳ್ಳುವಂತಿಲ್ಲ. ಆತ ಯಾವುದೇ ಭೌಗೋಳಿಕ ಪ್ರದೇಶಕ್ಕೆ ಸೇರಿದವನಾಗಿರಬಹುದು, ಗೋತ್ರ, ಜನಾಂಗಕ್ಕೆ ಸೇರಿದವನಾಗಿರಬಹುದು. ಮುಸ್ಲಿಮನಿಗೆ ಇರುವ ಸ್ವಾತಂತ್ರ್ಯ ಒಂದು ಮಿತಿ ಮತ್ತು ಸಂಹಿತೆಗೆ ಬದ್ಧವಾಗಿದೆ. ಆತ ಆ ಮಿತಿಯಿಂದ ಹೊರಗೆ ಹೋಗುವಂತಿಲ್ಲ. ಈ ಮಿತಿಗಳ ಬಗ್ಗೆ ಪ್ರವಾದಿ ಮುಹಮ್ಮದ್(ಸ) ಹೇಳಿರುವ ಮಾತುಗಳನ್ನು ಸ್ವಲ್ಪ ಗಮನಿಸಿ: ಇಹಲೋಕ ಮುಸ್ಲಿಮನ ಮಟ್ಟಿಗೆ ಕಾರಾಗೃಹವಾಗಿದೆ.

ಆದ್ದರಿಂದ ಕಂಡ ಕಂಡ ಮುಸ್ಲಿಮರನ್ನು ಮೂಲಭೂತವಾದಿಗಳೆಂದು ಕರೆಯುವುದನ್ನು ಇಸ್ಲಾಮ್ ಧರ್ಮವನ್ನು ತೇಜೋವಧೆಗೆ ಗುರಿಪಡಿಸುವ ತಂತ್ರವೆಂದೇ ಭಾವಿಸಬೇಕಾಗಿದೆ. ಒಂದು ವೇಳೆ ಯಾರಿಗಾದರೂ ಇಸ್ಲಾಮಿನ ಮೂಲಭೂತ ನಂಬಿಕೆಗಳು ಮತ್ತು ಅದು ಪ್ರತಿಪಾದಿಸುವ ವ್ಯವಸ್ಥೆಯ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ ಅದನ್ನು ಸ್ಪಷ್ಟವಾಗಿ ಹೇಳಿ ಬಿಡಬಹುದಲ್ಲ. ಒಂದು ವೇಳೆ ಇವರಿಗೆ ಸಾಧ್ಯವಿದ್ದರೆ ಇಸ್ಲಾಮಿನ ಮೂಲಭೂತ ನಂಬಿಕೆಗಳು ಮತ್ತು ಮೌಲ್ಯಗಳ ಸೌಧವನ್ನೇ ಕೆಡಹಿಬಿಡಲಿ. ಹಿಂದೆಯೂ ವೈಚಾರಿಕ, ರಾಜಕೀಯ ಮತ್ತು ಸೈನಿಕ ನೆಲೆಯಲ್ಲಿ ಇಂತಹ ಪ್ರಯತ್ನಗಳು

ನಡೆದಿವೆ. ಆದರೆ ಈ ಬುನಾದಿಗಳು ದೃಢ ಸಾಕ್ಷ್ಯಗಳನ್ನು ಅವಲಂಬಿಸಿಕೊಂಡಿದೆ ಎಂಬುದಂತೂ ನಿಷೇಧಿಸಲಾಗದಂತಹ ಸತ್ಯ. ಆದ್ದರಿಂದ ಅವುಗಳನ್ನು ನುಚ್ಚುನೂರು ಗೊಳಿಸಲಿಕ್ಕೂ ಅಷ್ಟೇ ದೃಢ ಸಾಕ್ಷ್ಯಗಳ ಅಗತ್ಯವಿದೆ.

ಆರೋಪಗಳ ಪಟ್ಟಿ

ಮೂಲಭೂತವಾದದ ಆರೋಪ ಹೊರಿಸುವವರು ತಮ್ಮ ಆರೋಪಪಟ್ಟಿಯಲ್ಲಿ ಸಾಮಾನ್ಯವಾಗಿ ನಾಲ್ಕು ವಿಷಯಗಳ ಬಗ್ಗೆ ಉಲ್ಲೇಖಿಸುತ್ತಾರೆ. ಇಸ್ಲಾಮ್ ಅಜ್ಞಾನ ಮತ್ತು ಪ್ರತಿಗಾಮಿತನದ ಪ್ರತೀಕ. ಅದು ಸಂಶೋಧನೆ ಮತ್ತು ಪ್ರಯೋಗಗಳನ್ನು ವಿರೋಧಿಸುತ್ತದೆ ಎಂಬುದು ಮೊದಲನೆಯ ಆರೋಪ. ಅದು ಮಹಿಳೆಯ ಸ್ವಾತಂತ್ರ್ಯವನ್ನು ಕಸಿದು ಆಕೆಯನ್ನು ಕೀಳಾಗಿ ಕಾಣುತ್ತದೆ. ಆಕೆಯನ್ನು ಪುರುಷನಿಗಿಂತ ಕೀಳೆಂದು ಪರಿಗಣಿಸುತ್ತದೆ ಎಂಬುದು ಎರಡನೆಯ ಆರೋಪ. ಇಸ್ಲಾಮ್ ಬಲಾತ್ಕಾರ ಮತ್ತು ಶಕ್ತಿಪ್ರಯೋಗವನ್ನು ನೆಚ್ಚಿಕೊಂಡಿದೆ ಎಂಬುದು ಮೂರನೆಯ ಆರೋಪ. ಧರ್ಮ, ನಂಬಿಕೆಯ ಸ್ವಾತಂತ್ರ್ಯವನ್ನು ಕಸಿದು ಜನರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿಸುತ್ತದೆ. ಯಾರು ಇಸ್ಲಾಮ್ ಸ್ವೀಕರಿಸುವುದಿಲ್ಲವೋ ಅವರನ್ನು ದ್ವಿತೀಯ ದರ್ಜೆಯ ನಾಗರಿಕರೆಂದು ಪರಿಗಣಿಸುತ್ತದೆ. ಆದ್ದರಿಂದ ಅದು ಮತಾಂಧರ ಧರ್ಮವಾಗಿದೆ. ತಮ್ಮ ನಂಬಿಕೆಯ ಬಗ್ಗೆ ಅವರು ಹುಚ್ಚು ಅಭಿಮಾನ ಇಟ್ಟುಕೊಂಡಿರುತ್ತಾರೆ. ಅದಕ್ಕೆ ಬೇಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾಗುತ್ತಾರೆ. ಅದರಲ್ಲಿ ಯಾವುದೇ ರೀತಿಯ ಬದಲಾವಣೆ ಅವರಿಗೆ ಸಹನೀಯವಲ್ಲ. ಎಲ್ಲ ಸಂದರ್ಭಗಳಲ್ಲೂ ಆಕ್ರಮಣಕ್ಕೆ ಸಿದ್ಧರಾಗಿರುತ್ತಾರೆ. ಧರ್ಮ ಪ್ರಚಾರಕ್ಕಾಗಿ ಅವರ ಬಳಿಯಿರುವ ಏಕೈಕ ಅಸ್ತ್ರ ಖಡ್ಗ. ಜಿಹಾದ್ ಅವರ ಅತ್ಯಂತ ಪ್ರಿಯವಾದ ಹವ್ಯಾಸ. ಇವು ಸಾಮಾನ್ಯವಾಗಿ ಬಳಕೆಯಾಗುವ ಆರೋಪಗಳು. ಹಲವೊಮ್ಮೆ ಇವುಗಳನ್ನು ಬೇರೆ ಬೇರೆ ರೀತಿಯಲ್ಲಿ ಪ್ರಯೋಗಿಸಲಾಗುತ್ತದೆ.

ಈ ಆರೋಪಗಳ ಬಗ್ಗೆ ವಸ್ತುನಿಷ್ಠ ವಿಮರ್ಶೆ ನಡೆಸುವ ಮೂಲಕ ಮೂಲಭೂತವಾದ ಎಂಬ ಅಪಪ್ರಚಾರದ ಪೊಳ್ಳುತನವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದೆ.

ಮೊದಲ ಆರೋಪ

ಇಸ್ಲಾಮ್ ಅಜ್ಞಾನಜನ್ಯ ಮತ್ತು ಕಿರಾತ ಧರ್ಮ ಎಂಬ ಆರೋಪವನ್ನೇ ಮೊದಲು ಪರಿಶೀಲಿಸೋಣ. ಮುಸ್ಲಿಮರು ಯಾವುದೇ ವಿವೇಚನೆಯಿಲ್ಲದೆ ಕೆಲವು ನಂಬಿಕೆ ಮತ್ತು ಆಚಾರಗಳನ್ನು ಪಾಲಿಸುತ್ತಾರೆ. ಇವರ ದೃಷ್ಟಿಯಲ್ಲಿ ವಿವೇಚನೆಗಿಂತ

ಅಂಧವಿಶ್ವಾಸವೇ ಮುಖ್ಯ. ಜ್ಞಾನಕ್ಕಿಂತ ನಂಬಿಕೆಗೆ, ಸಂಶೋಧನೆಗಿಂತ ಯಾರೋ ಒಬ್ಬ ವ್ಯಕ್ತಿ ಹೇಳಿದ ಮಾತಿಗೆ ಇವರು ಹೆಚ್ಚಿನ ಮಹತ್ವ ನೀಡುತ್ತಾರೆ. ಈ ಆರೋಪಗಳು ತರ್ಕಹೀನ ಎಂಬುದನ್ನು ಅರ್ಥಮಾಡಲು ಹೆಚ್ಚು ಶ್ರಮಪಡಬೇಕಾಗಿಲ್ಲ. ಮನುಷ್ಯನ ಭಾವಕ್ಕಿಂತ ಬುದ್ಧಿಗೆ ಹೆಚ್ಚಿನ ಮಹತ್ವ ನೀಡುವ ಏಕೈಕ ಧರ್ಮವಾಗಿರುವ ಇಸ್ಲಾಮಿನ ಬಗ್ಗೆ ಈ ರೀತಿಯ ಆರೋಪ ಹೊರಿಸುವುದಂತೂ ಅತ್ಯಂತ ವಿಪರ್ಯಾಸಕರ. ಜ್ಞಾನವೇ ಮನುಷ್ಯರ ಶ್ರೇಷ್ಠತೆಯ ಮಾಪಕ ಎಂಬುದು ಪವಿತ್ರ ಕುರ್‌ಆನಿನ ನಿಲುವು.

"ಅನಂತರ ಅಲ್ಲಾಹನು ಆದಮರಿಗೆ ಸಕಲ ವಸ್ತುಗಳ ಹೆಸರುಗಳನ್ನು ಕಲಿಸಿದನು, ತರುವಾಯ ಅವರನ್ನು ದೇವದೂತರ ಮುಂದೆ ತಂದು ನಿಲ್ಲಿಸಿದನು." (ಅಲ್‌ಬಕರ -31)

ಅಲ್ಲಾಹನು ಮನುಷ್ಯರನ್ನು ಸೃಷ್ಟಿಸಿ ಅವರಿಗೆ ಬರಹ ಮತ್ತು ಮಾತಿನ ಸಾಮರ್ಥ್ಯ ನೀಡಿದ ಎನ್ನುತ್ತದೆ ಪವಿತ್ರ ಕುರ್‌ಆನ್.

"ಆತ ದಯಾಮಯನು. ಈ ಕುರ್‌ಆನನ್ನು ಕಲಿಸಿರುವನು. ಅವನೇ ಮನುಷ್ಯನನ್ನು ಸೃಷ್ಟಿಸಿದನು ಮತ್ತು ಅವನಿಗೆ ಮಾತಾಡಲು ಕಲಿಸಿದನು." (ಅರ್ರಹ್‌ಮಾನ್: 1 - 4)

ಅಂತಿಮ ಪ್ರವಾದಿಗೆ ನೀಡಿದ ಚೊಚ್ಚಲ ನಿರ್ದೇಶನದಲ್ಲೇ ಓದುವಿಕೆಗೆ ಒತ್ತು ನೀಡಿದ ಪ್ರಭು ಜ್ಞಾನ, ಸಂಶೋಧನೆಗಳನ್ನು ನಿರುತ್ತೇಜಿಸುತ್ತಾನೆ ಎಂಬ ಆರೋಪವೇ ಅರ್ಥಹೀನ ಮತ್ತು ಅಸಂಬದ್ಧವಾದುದು.

"ಸಂದೇಶವಾಹಕರೇ ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ. ಅವನು ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು. ಓದಿರಿ, ಮತ್ತು ನಿಮ್ಮ ಪ್ರಭು ಮಹಾ ಉದಾರಿ. ಅವನು ಲೇಖನಿಯ ಮೂಲಕ ವಿದ್ಯೆ ಕಲಿಸಿದನು. ಮನುಷ್ಯನಿಗೆ ಗೊತ್ತಿಲ್ಲದ ಜ್ಞಾನವನ್ನು ಅವನಿಗೆ ದಯಪಾಲಿಸಿದನು." (ಅಲ್ ಅಲಕ್: 1-5)

ಮನುಷ್ಯನನ್ನು ಹೆಚ್ಚೆ ಹೆಚ್ಚೆಗೂ ಚಿಂತನ ಮಂಥನ ನಡೆಸುವಂತೆ ಇಸ್ಲಾಮ್ ಪ್ರೇರೇಪಿಸುತ್ತದೆ. ಚಿಂತಿಸುವ ಮತ್ತು ನೋಡುವ ಸಾಮರ್ಥ್ಯವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡುವಂತೆ ಅದು ಕರೆ ನೀಡುತ್ತದೆ.

"ಅಲ್ಲಾಹನ ಕೃಪೆಯ ಪರಿಣಾಮಗಳನ್ನು ನೋಡಿರಿ. ಸತ್ತು ಹೋದ ಭೂಮಿಯನ್ನು ಆತ ಮತ್ತೆ ನಳನಳಿಸುವಂತೆ ಮಾಡುತ್ತಾನೆ." (ಅರ್ರೂಮ್-50)

ದೇವಪರತೆಯ ಬಗ್ಗೆ ಚರ್ಚಿಸುವಾಗಲೂ ಇಸ್ಲಾಮ್ ವಿದ್ಯೆಯ ಬಗ್ಗೆ ಪ್ರಸ್ತಾಪಿಸುತ್ತದೆ.

"ಜ್ಞಾನದಲ್ಲಿ ಪರಿಪಕ್ವತೆ ಹೊಂದಿದವರು- 'ನಾವು ಇವುಗಳ ಬಗ್ಗೆ ವಿಶ್ವಾಸ ತಳೆದಿದ್ದೇವೆ- ಇವೆಲ್ಲ ನಮ್ಮ ಪ್ರಭುವಿನ ವತಿಯಿಂದಲೇ ಆಗಿರುತ್ತವೆ' ಎನ್ನುತ್ತಾರೆ" (ಆಲಿ ಇಮ್ರಾನ್-7)

"ಅಲ್ಲಾಹನ ದಾಸರ ಪೈಕಿ ಜ್ಞಾನವುಳ್ಳವರು ಮಾತ್ರ ಭಯಪಡುತ್ತಾರೆ" (ಫಾತಿರ್-28)

ಪ್ರವಾದಿ ಮುಹಮ್ಮದ್‌ರವರು(ಸ) ಈ ಬಗ್ಗೆ ಹೇಳಿರುವ ಮಾತುಗಳನ್ನು ಸ್ವಲ್ಪ ಗಮನಿಸಿ:

"ಅಲ್ಲಾಹನು ಯಾರಿಗೆ ಹಿತ ಮಾಡಲು ಇಷ್ಟಪಡುತ್ತಾನೋ ಆತನಿಗೆ ಧರ್ಮದ ಜ್ಞಾನ ಕರುಣಿಸುತ್ತಾನೆ." (ಹದೀಸ್)

"ವಿದ್ಯೆ ಮತ್ತು ಯುಕ್ತಿ ಸತ್ಯವಿಶ್ವಾಸಿಗಳ ಕಳೆದುಹೋದ ಸಂಪತ್ತಾಗಿದೆ." (ಹದೀಸ್)

"ಅಜ್ಞಾನಿಯ ಆರಾಧನೆಗಿಂತಲೂ ಜ್ಞಾನವಂತನ ವಿದ್ಯೆಗೆ ಹೆಚ್ಚಿನ ಶ್ರೇಷ್ಠತೆಯಿದೆ." (ಹದೀಸ್)

ಈ ಬೋಧನೆಗಳ ಆಧಾರದಲ್ಲಿ ಇಸ್ಲಾಮ್ ಜಗತ್ತಿನಲ್ಲಿ ಒಂದು ವಿಶಿಷ್ಟ ನಾಗರಿಕತೆಗೆ ಜನ್ಮ ನೀಡಿತು. ಸಂಶೋಧನೆ ಮತ್ತು ಆವಿಷ್ಕಾರಗಳ ದೃಷ್ಟಿಯಲ್ಲಿ ಜಗತ್ತಿನ ಯಾವುದೇ ಧಾರ್ಮಿಕ ಸಮೂಹಕ್ಕೆ ಅಷ್ಟು ಶ್ರೇಷ್ಠ ನಾಗರಿಕತೆಗೆ ಜನ್ಮ ಕೊಡುವುದು ಸಾಧ್ಯವಾಗಿಲ್ಲ. ರಸಾಯನ ಶಾಸ್ತ್ರ ಎಂಬ ವಿಜ್ಞಾನ ಶಾಖೆಗೆ ಅಡಿಪಾಯ ಹಾಕಿತು. ಬೀಜಗಣಿತ ಎಂಬ ಗಣಿತಶಾಸ್ತ್ರದ ಹೊಸ ವಿಭಾಗಕ್ಕೆ ನಾಂದಿ ಹಾಡಿತು. ಭೂಗೋಳ, ಖಗೋಳ ಶಾಸ್ತ್ರಗಳಲ್ಲಿ ಹೊಸ ಹೊಸ ಸಂಶೋಧನೆಗಳಿಗೆ ಅಡಿಪಾಯ ಹಾಕಿತು. ವೈದ್ಯ ವಿಜ್ಞಾನಕ್ಕೆ ಇಸ್ಲಾಮಿನ ಕೊಡುಗೆಯಂತೂ ಅಪಾರವಾದುದು. ತತ್ವಶಾಸ್ತ್ರಕ್ಕೆ ಅದು ಹೊಸ ಹೊಳಹುಗಳನ್ನು ಕೊಟ್ಟಿತು. ಅದು ಸಾಮಾಜಿಕ ಮತ್ತು ನಾಗರಿಕ ಕಾನೂನು ಗಳಿಗೆ ನಿರ್ದಿಷ್ಟ ಚೌಕಟ್ಟನ್ನು ಒದಗಿಸಿ ಕೊಟ್ಟಿತು. ಜಗತ್ಪ್ರಸಿದ್ಧ ಗ್ರಂಥಾಲಯ, ವಿಶ್ವವಿದ್ಯಾಲಯ ಮತ್ತು ಶಿಕ್ಷಣ ಕೇಂದ್ರಗಳ ಹುಟ್ಟಿಗೆ ಅದು ಕಾರಣವಾಯಿತು. ಜ್ಞಾನದ ಎಲ್ಲ ಶಾಖೆ ಗಳಿಂದಲೂ ಸಮೃದ್ಧವಾದ ನಾಗರಿಕತೆಯನ್ನು ಜಗತ್ತಿಗೆ ಅದು ಪರಿಚಯಿಸಿತು. ಮಾತ್ರವಲ್ಲ ಮುಂದಿನ ತಲೆಮಾರಿಗೂ ಅದನ್ನು ಹಸ್ತಾಂತರಿಸಿತು. ರಾಜಕೀಯ ಶಾಸ್ತ್ರದ ಶ್ರೀಮಂತಿಕೆಯನ್ನು ಹೆಚ್ಚಿಸಿ ಹತ್ತು ಹಲವು ಕ್ರಾಂತಿಗಳಿಗೆ, ಬದಲಾವಣೆಗಳಿಗೆ ಹಾದಿ ಮಾಡಿತು. ಇಂದು ಈ ಸಂಸ್ಕೃತಿ ಮತ್ತು ನಾಗರಿಕತೆಯನ್ನು

ಕಿರಾತ ಮತ್ತು ಕರಾಳವೆಂದು ಬಣ್ಣಿಸುತ್ತಿರುವವರು ನಿಜವಾಗಿ ತಮ್ಮ ಜ್ಞಾನ ಮತ್ತು ವಿವೇಕದ ಬಗ್ಗೆ ಇತರರಲ್ಲಿ ಸಂಶಯ ಮೂಡಿಸುತ್ತಿದ್ದಾರೆ. ಒಂದೋ ಇವರು ಅಜ್ಞಾನಿಗಳಾಗಿದ್ದಾರೆ, ಇಲ್ಲವೇ ಅಪ್ರಾಮಾಣಿಕರಾಗಿದ್ದಾರೆ. ಇಸ್ಲಾಮಿ ನಾಗರಿಕತೆ ವಿಜ್ಞಾನ, ತಂತ್ರಜ್ಞಾನ ರಂಗಗಳಿಗೆ ನೀಡಿದ ಕೊಡುಗೆಗಳು ಇತಿಹಾಸದ ಪುಟಗಳಲ್ಲಿ ಅಚ್ಚಳಿಯದ ಅಧ್ಯಾಯವೆಂದು ದಾಖಲಾಗಿವೆ. ವಿದ್ಯೆ, ಜ್ಞಾನ ಯಾವುದೇ ಕಡೆಯಿಂದ ಬಂದರೂ ಅದನ್ನು ಸ್ವೀಕರಿಸಬೇಕು. ಅದು ಮಾನವಕುಲದ ಸಾಮೂಹಿಕ ಸೊತ್ತು ಎಂಬುದು ಇಸ್ಲಾಮಿನ ನಿಲುವು. ಆದ್ದರಿಂದಲೇ ಅದು ಜಗತ್ತಿಗೆ ರಸಾಯನ ಶಾಸ್ತ್ರ ಭೂಗೋಳ ಶಾಸ್ತ್ರಗಳನ್ನು ಪರಿಚಯಿಸಿದರೆ, ಸ್ವತಃ ತಾನು ಗ್ರೀಸ್‌ನಿಂದ ವೈದ್ಯಕೀಯ ವಿಜ್ಞಾನವನ್ನು ಕಲಿಯಿತು. ಬದಲಿಗೆ ಯೂನಾನಿ ವೈದ್ಯಶಾಸ್ತ್ರ ಎಂಬ ಹೊಸ ಚಿಕಿತ್ಸಾ ಶಾಖೆಯನ್ನು ಪರಿಚಯಿಸಿಕೊಟ್ಟಿತು. ಎಲ್ಲ ರಾಷ್ಟ್ರಗಳ ಪ್ರಮುಖ ಸಾಂಸ್ಕೃತಿಕ ಮತ್ತು ಜ್ಞಾನ ಭಂಡಾರವನ್ನು ಅರಬರ ಮಡಿಲಿಗೆ ತಂದೊಪ್ಪಿಸಿತು. ಧರ್ಮ, ಸಮುದಾಯ ಭೇದವಿಲ್ಲದೆ ಕಲಾವಿದರಿಗೆ ಪ್ರೋತ್ಸಾಹ ನೀಡಿದ್ದು ಸಣ್ಣ ಸಾಧನೆಯೇನಲ್ಲ.

ನಿಸರ್ಗದ ಅದ್ಭುತಗಳ ಬಗ್ಗೆ ಚಿಂತನೆ ನಡೆಸುವಂತೆ ಪವಿತ್ರ ಕುರ್‌ಆನ್ ಅನೇಕ ಕಡೆಗಳಲ್ಲಿ ಸತ್ಯವಿಶ್ವಾಸಿಗಳಿಗೆ ಕರೆ ನೀಡುತ್ತದೆ. ಮಾತ್ರವಲ್ಲ ಹೀಗೆ ಮಾಡುವುದು ವಿವೇಕವಂತರ ಲಕ್ಷಣ ಎಂದು ಸಾರುತ್ತದೆ. ಧಾರ್ಮಿಕ ಕಾನೂನುಗಳ ವಿಚಾರದಲ್ಲೂ ಸಂಶೋಧನೆಗೆ ಅವಕಾಶ ಕಲ್ಪಿಸಲಾಗಿದೆ. ಕುರ್‌ಆನ್ ಮತ್ತು ಪ್ರವಾದಿಯ ನುಡಿಗಳ ನಂತರ ಇಜ್ತಿಹಾದ್ ಅಥವಾ ಸಂಶೋಧನೆಗೆ ಅತ್ಯಂತ ಹೆಚ್ಚಿನ ಒತ್ತು ನೀಡಲಾಗಿದೆ. ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಹೆಮ್ಮೆ ಪಡುವವರು ಇನ್ನೊಂದು ವಿಷಯವನ್ನೂ ತಿಳಿದುಕೊಳ್ಳಬೇಕು. ವಿಜ್ಞಾನದ ಅತ್ಯಂತ ಮಹತ್ವದ ಭಾಗವಾಗಿರುವ ಅನುಭವಜನ್ಯ ಸಂಶೋಧನೆಯ ಹುಟ್ಟಿಗೆ ಕಾರಣವಾಗಿದ್ದು ಕೂಡಾ ಮುಸ್ಲಿಮರೇ. ಅದಕ್ಕೆ ಮೊದಲು ಗ್ರೀಕ್ ಸಂಸ್ಕೃತಿಗೆ ಸಾರಗ್ರಹಣದ ಕ್ರಮಾ ಮಾತ್ರ ತಿಳಿದಿತ್ತು. ವಾಸ್ತವಿಕತೆಗಳ ಅಧ್ಯಯನ ನಡೆಸಿ ಅವುಗಳಿಂದ ಒಂದು ಪರಿಣಾಮಕ್ಕೆ ತಲುಪುವುದು ಮುಸ್ಲಿಮ್ ವಿಜ್ಞಾನಿಗಳ ಕೊಡುಗೆಯಾಗಿದೆ.

ಮೂಲಭೂತವಾದದ ಆರೋಪ ಹೊರಿಸುವವರು ಈ ವಾಸ್ತವಿಕತೆಗಳನ್ನು ಸ್ವಲ್ಪ ಪರಿಶೀಲಿಸಿದರೆ ಒಳ್ಳೆಯದು. ತಮ್ಮ ವಾದಗಳಲ್ಲಿ ಪೂರ್ವಗ್ರಹವಲ್ಲದೆ ಬೇರೇನಾದರೂ ಇದೆಯೇ ಎಂಬುದನ್ನು ಇವರು ಆಲೋಚಿಸಬೇಕು.

ಎರಡನೆಯ ಆರೋಪ

ಇಸ್ಲಾಮ್ ಮಹಿಳೆಯರನ್ನು ಎರಡನೆ ದರ್ಜೆಯ ನಾಗರಿಕರಂತೆ ನಡೆಸಿಕೊಳ್ಳುತ್ತದೆ ಎಂದು ಸಂಸ್ಕೃತಿಯ ಈ ಸ್ವಯಂಘೋಷಿತ ಗುತ್ತೇದಾರರು ಆರೋಪಿಸುತ್ತಾರೆ. ಮಹಿಳೆಯರನ್ನು ನಾಲ್ಕು ಗೋಡೆಗಳ ಮಧ್ಯೆ ಕಟ್ಟಿ ಹಾಕಿ ಅವರ ಎಲ್ಲ ರೀತಿಯ ಸ್ವಾತಂತ್ರ್ಯ ಕಸಿಯುತ್ತಾರೆ ಎಂಬುದು ಇವರ ಆರೋಪ. ಮಹಿಳೆಯರ ಸೌಂದರ್ಯವನ್ನು ಮಾರುಕಟ್ಟೆಯ ಸರಕಾಗಿ ಪರಿವರ್ತಿಸಲು ಇಸ್ಲಾಮ್ ಸಿದ್ಧವಿಲ್ಲ. ಮಹಿಳೆ ತನ್ನ ಪತಿಯ ಮುಂದೆ ಮಾತ್ರ ಸೌಂದರ್ಯ ಪ್ರಕಟಿಸಬಹುದು ಎಂಬ ಕಟ್ಟುಪಾಡನ್ನು ಅದು ಹೇರುತ್ತದೆ. ಒಂದು ವೇಳೆ ಈ ಕಟ್ಟಳೆಗಳು ಜಾರಿಗೊಂಡರೆ ಸಮಕಾಲೀನ ಸಮಾಜ ಎಲ್ಲ ರೀತಿಯ ಥಳುಕು ಬಳುಕು ಕಳಕೊಳ್ಳುತ್ತವೆ ಎಂಬುದು ಇವರ ಅಂಬೋಣ. ಮನರಂಜನೆ, ಮೋಜು ಸಂಪೂರ್ಣ ಸ್ತಬ್ಧವಾಗಿ ಮಾರುಕಟ್ಟೆ ತಣ್ಣಗಾಗಿ ಬಿಡುತ್ತದೆ ಎಂಬ ಭೀತಿ ಇವರದ್ದು. ಇಸ್ಲಾಮ್ ಮಹಿಳೆಯರ ಎಲ್ಲ ಹಕ್ಕುಗಳನ್ನೂ ಕಸಿದು ಆಕೆ ಪುರುಷರ ದಯೆ, ಅನುಕಂಪದಲ್ಲಿ ಬದುಕು ಸಾಗಿಸಲು ಅನಿವಾರ್ಯವಾದ ಪರಿಸ್ಥಿತಿ ನಿರ್ಮಿಸುತ್ತದೆ. ಇವರಂತೂ ಮಹಿಳೆಯರನ್ನು ತಾಯಿ, ಮಗಳು ಮತ್ತು ಸೋದರಿ ಯನ್ನಾಗಿ ಕಾಣಬಯಸುತ್ತಾರೆ. ಇಲ್ಲವೇ ಮರ್ದಿತ ಪತ್ನಿಯ ರೂಪದಲ್ಲಿ ನೋಡ ಬಯಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಮುಂದುವರಿದ ಸಮಾಜಗಳಲ್ಲಿ ಮಹಿಳೆಗೆ ಸ್ವತಂತ್ರ ವ್ಯಕ್ತಿತ್ವವಿದೆ. ತನ್ನ ಬೌದ್ಧಿಕ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಸೌಂದರ್ಯ, ವೈಯಾರದಿಂದ ಸಾಧನೆಗಳ ಸೌಧವನ್ನೇ ಇವರು ನಿರ್ಮಿಸಿ ಬಿಡುತ್ತಾರೆ. ಮತಾಂಧತೆ ಯಿಂದ ಕುರುಡಾಗಿ ಹೋಗಿರುವವರಿಗೆ ಮಹಿಳೆ ವಿಜ್ಞಾನಿಯಾಗುವುದು, ಆಡಳಿತಗಾರಳಾಗು ವುದು, ರಾಜಕೀಯ ನಾಯಕಿಯಾಗುವುದು ಬೇಕಾಗಿಲ್ಲ. ಯಾಕೆಂದರೆ ಈ ಎಲ್ಲ ರಂಗಗಳೂ ಇವರ ದೃಷ್ಟಿಯಲ್ಲಿ ಪುರುಷರಿಗೆ ಸೀಮಿತವಾದುದು. ಇಂತಹ ಹತ್ತು ಹಲವು ಆರೋಪಗಳನ್ನು ಇಸ್ಲಾಮ್ ಮತ್ತು ಮುಸ್ಲಿಮ್ ಮೂಲಭೂತವಾದಿಗಳ ಮೇಲೆ ಹೊರಿಸಲಾಗುತ್ತಿದೆ. ಈ ಆರೋಪಗಳು ಆಧುನಿಕ, ಶಿಕ್ಷಿತ ಮಹಿಳೆಯರಿಗೆ ಅತ್ಯಂತ ಆಕರ್ಷಕವಾಗಿ ಕಾಣಿಸುತ್ತದೆ. ಬುದ್ಧಿಜೀವಿಗಳಂತೂ ಈ ಆರೋಪಗಳನ್ನು ಕೇಳಿ ಹರ್ಷಿತರಾಗುತ್ತಾರೆ. ವಿಪರ್ಯಾಸವೆಂದರೆ ಅತ್ಯಂತ ಸುಶಿಕ್ಷಿತ ಜನರಿಗೂ ಇಸ್ಲಾಮಿನ ಶಿಕ್ಷಣದ ಬಗ್ಗೆ ಪ್ರಾಥಮಿಕ ಮಾಹಿತಿಯೂ ಇರುವುದಿಲ್ಲ.

ಈ ಆರೋಪಗಳನ್ನು ಹೊರಿಸುವ ಬುದ್ಧಿಜೀವಿಗಳ ಗುಂಪಿನಲ್ಲಿ ಎರಡು ರೀತಿಯ ಜನರಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾದವರದ್ದು ಒಂದು ವಿಭಾಗವಾದರೆ

ಪುರಾತನ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಹೊಂದಿರು ವವರದ್ದು ಇನ್ನೊಂದು ವಿಭಾಗ.

ಮಹಿಳೆಯ ಇತಿಹಾಸ, ವರ್ತಮಾನ

ಪುರಾತನ ಪಾಶ್ಚಾತ್ಯ ಸಮಾಜ ಮಹಿಳೆಯರನ್ನು ಯಾವ ರೀತಿ ಕಂಡಿದೆ ಎಂಬುದಕ್ಕೆ ಇತಿಹಾಸದ ಪುಟಗಳಲ್ಲಿ ಸಾಕಷ್ಟು ಪುರಾವೆಗಳಿವೆ. ಬಹಳ ಕಾಲದವರೆಗೂ ಐರೋಪ್ಯ ಬುದ್ಧಿಜೀವಿಗಳು ಮಹಿಳೆಗೆ ಆತ್ಮ ಇದೆಯೋ ಇಲ್ಲವೋ ಎಂಬ ಚರ್ಚೆ ಯಲ್ಲಿ ತೊಡಗಿದ್ದರು. ಒಂದು ವೇಳೆ ಆಕೆಗೆ ಆತ್ಮ ಇದ್ದರೂ ಅದು ಪ್ರಾಣಿಗಳ ಆತ್ಮವಾಗಿರ ಬಹುದೇ ಎಂಬ ಜಿಜ್ಞಾಸೆ ಅವರದ್ದಾಗಿತ್ತು. ಹೆಣ್ಣು ಹುಟ್ಟಿನಿಂದಲೇ ಪುರುಷನ ಗುಲಾಮಳೇ ಅಥವಾ ಗುಲಾಮರಿಗಿಂತ ಮಿಗಿಲಾದ ಸ್ಥಾನಮಾನ ಆಕೆಗಿದೆಯೇ ಎಂಬುದೂ ಅವರ ಚರ್ಚೆಯ ವಿಷಯವಾಗಿತ್ತು. ಕ್ರೈಸ್ತ ಪುರೋಹಿತರಂತೂ ಹೆಣ್ಣು ಜನ್ಮತಃ ಪಾಪಿ ಎಂಬ ನಂಬಿಕೆಯನ್ನು ಜನಮಾನಸದಲ್ಲಿ ಬಿತ್ತಿದ್ದರು. ಬ್ರಹ್ಮಚಾರಿಗಳು ಸದಾ ದೇವಧ್ಯಾನ ದಲ್ಲಿ ತೊಡಗಿರುತ್ತಾರೆ. ಆದರೆ ವಿವಾಹಿತ ಪುರುಷರು ಸದಾ ತಮ್ಮ ಪತ್ನಿಯರನ್ನು ಖುಷಿಪಡಿಸುವ ಪ್ರಯತ್ನದಲ್ಲಿ ತಲ್ಲೀನರಾಗಿರುತ್ತಾರೆ ಎಂಬುದು ಕ್ರೈಸ್ತ ಗುರು ಪೌಲ್‌ರ ವಾದವಾಗಿತ್ತು. ರೋಮ್‌ನ ಇತಿಹಾಸದ ಒಂದು ಸಣ್ಣ ಅವಧಿಯಲ್ಲಿ ಮಹಿಳೆ ಸಮಾಜದ ಕೇಂದ್ರ ಬಿಂದುವಾಗಿ ಮಾರ್ಪಟ್ಟಿದ್ದಳು. ಆದರೆ ಆಕೆ ಆಡಳಿತಗಾರರು ಮತ್ತು ಶ್ರೀಮಂತರ ಆಕರ್ಷಣೆಯ ವಸ್ತುವಷ್ಟೆ ಆಗಿದ್ದಳು. ಕೆಲವು ಬುದ್ಧಿಜೀವಿಗಳು ಪುರುಷನ ಸಂಪತ್ತಿನ ಪಟ್ಟಿಯಲ್ಲಿ ಜಾನುವಾರು, ಭೂಮಿ, ಚಿನ್ನಾಭರಣಗಳ ಜತೆಗೆ ಹೆಣ್ಣನ್ನೂ ಸೇರಿಸಿದ್ದರು.

ಕೈಗಾರಿಕಾ ಕ್ರಾಂತಿಯ ನಂತರ ಒಂದು ಕಾಲದವರೆಗೆ ಯುರೋಪಿನಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ರಾಜಕೀಯ ಸ್ವಾತಂತ್ರ್ಯ ಇರಲಿಲ್ಲ. ಮಾತ್ರವಲ್ಲ, ಆರ್ಥಿಕವಾಗಿ ಅವರನ್ನು ಸ್ವಾವಲಂಬಿಗಳೆಂದು ಪರಿಗಣಿಸಲಾಗಿರಲಿಲ್ಲ. ಸ್ವತಃ ನಮ್ಮ ದೇಶದ ಧಾರ್ಮಿಕ ಕಾನೂನುಗಳ ದೃಷ್ಟಿಯಲ್ಲಿ ಮಹಿಳೆಗೆ ಯಾವುದೇ ಸ್ಥಾನಮಾನ ಇರಲಿಲ್ಲ. ಎಲ್ಲಿಯವರೆಗೆಂದರೆ ಪತಿಯ ಸಾವಿನೊಂದಿಗೆ ಆಕೆಯೂ ಚಿತೆಗೇರಿ ಸಾವನ್ನಪ್ಪಬೇಕಾಗಿತ್ತು. ಮನುಸ್ಮೃತಿಯಲ್ಲಿ ಮಹಿಳೆಗೆ ಯಾವ ಸ್ಥಾನಮಾನ ನೀಡಲಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವಂತಹದ್ದೇ.

ಕೈಗಾರಿಕಾ ಕ್ರಾಂತಿ ನಡೆದು ಇಷ್ಟು ವರ್ಷಗಳಾಗಿದ್ದರೂ ಹೆಚ್ಚಿನ ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಇನ್ನೂ ಪುರುಷರಿಗೆ ಸಮಾನವಾದ ವೇತನ ನಿಗದಿಯಾಗಿಲ್ಲ. ಆಕೆ

ಪ್ರಧಾನಿಯೋ ರಾಷ್ಟ್ರಾಧ್ಯಕ್ಷೆಯೋ ಆಗಬಹುದು. ಆದರೆ ಸಾಮಾಜಿಕ ರಂಗದಲ್ಲಿ ಆಕೆಗಿನ್ನೂ ದ್ವಿತೀಯ ದರ್ಜೆಯ ಸ್ಥಾನಮಾನವೇ. ಆಕೆಯನ್ನು ಈಗಲೂ ಆಪ್ತ ಸಹಾಯಕಿ, ಪರಿಚಾರಕಿಯ ಹುದ್ದೆಗಷ್ಟೇ ಸೀಮಿತಗೊಳಿಸಲಾಗಿದೆ. ಕೈಗಾರಿಕಾ ಕ್ರಾಂತಿಯ ನಂತರ ಮಹಿಳಾ ಸ್ವಾತಂತ್ರ್ಯದ ಹೋರಾಟ ಹಲವು ಹೊಸ ಆಯಾಮಗಳನ್ನು ಪಡೆದು ಕೊಂಡಿದೆ. ಪುರುಷರ ವಿರುದ್ಧ ಬಂಡಾಯ ಎಂಬ ರೀತಿಯಲ್ಲೂ ಸ್ತ್ರೀವಾದಿ ಹೋರಾಟ ಗುರುತಿಸಲ್ಪಟ್ಟಿದೆ. ಆದರೆ ವ್ಯಾವಹಾರಿಕ ಬದುಕಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡಿದರೆ ದಿಗಿಲು ಹುಟ್ಟಿಸುವ ಚಿತ್ರಣವೇ ನಮ್ಮ ಕಣ್ಣ ಮುಂದೆ ಬರುತ್ತದೆ. ಸ್ತ್ರೀ ಸಮಾನತೆ, ಸ್ವಾತಂತ್ರ್ಯದ ಘೋಷಣೆಗಳ ಹೊರತಾಗಿಯೂ ಮಹಿಳೆಯನ್ನು ಸಾಮಾನ್ಯ ವಾಗಿ ಪುರುಷ ಕೇಂದ್ರಿತ ಮಾನದಂಡಗಳ ಆಧಾರದಲ್ಲೇ ಅಳೆಯಲಾಗುತ್ತಿದೆ.

ನಮ್ಮ ದೇಶದ ಬುದ್ಧಿಜೀವಿಗಳೂ ಸಾಮಾನ್ಯವಾಗಿ ಮುಸ್ಲಿಮ್ ಸಮಾಜದಲ್ಲಿ ಮಹಿಳೆಯರ ಸ್ಥಿತಿ ಅತ್ಯಂತ ಶೋಚನೀಯ ಎಂದು ಬೊಬ್ಬಿರಿಯುತ್ತಾರೆ. ಇಸ್ಲಾಮೀ ಕಾನೂನುಗಳ ವಿರುದ್ಧ ಅಪಪ್ರಚಾರ ನಡೆಸಲು ಶಾಬಾನು, ಅಮೀನಾ ಪ್ರಕರಣಗಳ ನೆರವನ್ನೂ ಪಡೆಯುತ್ತಾರೆ. ಅದೇ ವೇಳೆ ಬಹುಸಂಖ್ಯಾತ ಸಮುದಾಯದಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಿಂಸೆ ಇವರ ಕಣ್ಣಿಗೆ ಕಾಣಿಸುವುದಿಲ್ಲ. ರೂಪ್ ಕನ್ವರ್ ಚಿತೆಗೇರಿದ ಘಟನೆಯನ್ನು ವೈಭವೀಕರಿಸುವ ಗುಂಪಿನ ಬಗ್ಗೆ ಇವರು ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಮತ್ತೊಂದೆಡೆ ಮಹಿಳೆಯರನ್ನು ಭೋಗ ವಸ್ತುವಾಗಿ ಕಾಣುವ ಸರಕು ಸಂಸ್ಕೃತಿಯೂ ನಮ್ಮ ನಗರ ಪಟ್ಟಣಗಳಿಗೆ ಲಗ್ಗೆಯಿಟ್ಟಿದೆ. ಮೊದಲು ಮನೆಯ ನಾಲ್ಕು ಗೋಡೆಗಳ ಮಧ್ಯೆ ಶೋಷಣೆಗೆ ಗುರಿಯಾಗಿದ್ದ ಹೆಣ್ಣು ಇದೀಗ ಮನೆಯ ಹೊರಗೆ ಕಾಮುಕ ಕಣ್ಣುಗಳ ಪ್ರಹಾರಕ್ಕೆ ಸಿಲುಕಿದ್ದಾಳೆ. ಪ್ರತಿಯೊಂದು ಹಂತದಲ್ಲೂ ಆಕೆಯನ್ನು ಅನಿವಾರ್ಯತೆಯ ದುರ್ಲಾಭ ಪಡೆದು ಸತಾಯಿಸಲಾಗುತ್ತಿದೆ. ಪಾಶ್ಚಾತ್ಯ ಸಂಸ್ಕೃತಿಯಿಂದ ಎರವಲು ಪಡೆದ ಗ್ಲಾಮರ್ ಕಲ್ಚರ್‌ಗೆ ನಮ್ಮಲ್ಲೂ ಕ್ಷಿಪ್ರ ಜನಪ್ರಿಯತೆ ದೊರೆಯುತ್ತಿದೆ.

ಮಹಿಳೆ ಇಸ್ಲಾಮಿನ ದೃಷ್ಟಿಯಲ್ಲಿ

ಇನ್ನು ಮಹಿಳೆಯರ ಬಗ್ಗೆ ಇಸ್ಲಾಮಿನ ನಿಲುವು ಏನು ಎಂಬುದನ್ನು ಸ್ವಲ್ಪ ಪರಿಶೀಲಿಸೋಣ. ಮುಸ್ಲಿಮ್ ಸಮಾಜದಲ್ಲಿ ಆಕೆಗೆ ಯಾವ ರೀತಿಯ ಗೌರವ, ಘನತೆಯಿದೆ ಎಂಬುದನ್ನು ನೋಡೋಣ. ಧಾರ್ಮಿಕ ನೆಲೆಯಲ್ಲಿ ಆಕೆಗೆ ಇರುವ

ಸ್ಥಾನಮಾನ ಏನು, ಸಮಾಜದ ನಿರ್ಮಾಣ ಮತ್ತು ರಚನೆಯಲ್ಲಿ ಆಕೆಯ ಪಾತ್ರ ಏನು ಎಂಬುದನ್ನು ಸಂಕ್ಷಿಪ್ತವಾಗಿ ಅಭ್ಯಸಿಸೋಣ.

ಮಹಿಳೆಯ ಸ್ವತಂತ್ರ ವ್ಯಕ್ತಿತ್ವವನ್ನು ಅಂಗೀಕರಿಸಿದ ಜಗತ್ತಿನ ಏಕೈಕ ಧರ್ಮವಾಗಿದೆ ಇಸ್ಲಾಮ್. ಪವಿತ್ರ ಕುರ್‌ಆನಿನ ಈ ವಚನವನ್ನು ಗಮನಿಸಿ:

"ಜನರೇ, ನೀವು ನಿಮ್ಮ ಪಾಲಕ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು. ಮತ್ತು ಅವೆರಡರಿಂದ ಅನೇಕಾನೇಕ ಸ್ತ್ರೀ-ಪುರುಷರನ್ನು ಲೋಕದಲ್ಲಿ ಹಬ್ಬಿಸಿದನು." (ಅನ್ನಿಸಾ: 1)

ಅಲ್ಲಾಹನು ಕೆಲವು ಮಹತ್ವದ ನಿರ್ದೇಶನಗಳನ್ನು ನೀಡುವುದಕ್ಕೆ ಮುನ್ನ ಪೀಠಿಕೆಯಾಗಿ ಈ ಮಾತನ್ನು ಹೇಳಿದ್ದಾನೆ. ಮೂಲಭೂತವಾಗಿ ಪುರುಷರು ಮತ್ತು ಮಹಿಳೆಯರು ಸಮಾನರು. ಆದರೆ ಶಾರೀರಿಕ ದೃಷ್ಟಿಯಿಂದ ಅವರ ಮಧ್ಯೆ ವ್ಯತ್ಯಾಸವಿದೆ. ಆದ್ದರಿಂದಲೇ ಅಲ್ಲಾಹನು ಇಬ್ಬರ ಕಾರ್ಯ ಕ್ಷೇತ್ರವನ್ನು ವಿಂಗಡಿಸಿದ್ದಾನೆ. ಆದರೆ ಕುಟುಂಬ ಮತ್ತು ಸಮಾಜದ ನಿರ್ಮಾಣದಲ್ಲಿ ಇಬ್ಬರ ಜವಾಬ್ದಾರಿಯೂ ಸಮಾನವಾದುದು. ಅವರ ಪಾತ್ರಗಳಲ್ಲಿ ಭಿನ್ನತೆಯಿರಬಹುದು. ಆದರೆ ಅವರು ಪರಸ್ಪರ ಪೂರಕವಾಗಿ ಕಾರ್ಯಾಚರಿಸಬೇಕಾದವರು. ಪವಿತ್ರ ಕುರ್‌ಆನ್ ಇಬ್ಬರಿಗೂ ದೇವಭಕ್ತಿ ಮೈಗೂಡಿಸುವಂತೆ ಕರೆ ನೀಡುತ್ತದೆ. ಧಾರ್ಮಿಕ ಆದೇಶ, ನಿರ್ದೇಶನಗಳ ಪಾಲನೆಗೆ ಇಬ್ಬರೂ ಸಮಾನ ಜವಾಬ್ದಾರರಾಗಿದ್ದಾರೆ.

"ಅಲ್ಲಾಹನು ಯಾವ ಜೀವಿಯ ಮೇಲೂ ಅವನ ಶಕ್ತಿಗೆ ಮೀರಿದ ಹೊಣೆ ಹೊರಿಸುವುದಿಲ್ಲ." (ಅಲ್‌ಬಕರಃ - 286)

"ಪ್ರತಿಯೊಬ್ಬನೂ ತನ್ನ ದುಡಿಮೆಯ ಬದಲಿಗೆ ಅಡವಿಡಲ್ಪಟ್ಟಿದ್ದಾನೆ." (ಅಲ್‌ಮುದಸ್ಸಿರ್ - 38)

"ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆಯನ್ನು ಹೊರುವುದಿಲ್ಲ." (ಅಲ್ ಅನ್‌ಆಮ್ - 164)

ಇಸ್ಲಾಮಿನ ದೃಷ್ಟಿಯಲ್ಲಿ ಹೆಣ್ಣು - ಗಂಡು ಪ್ರತ್ಯೇಕ ವ್ಯಕ್ತಿತ್ವ ಹೊಂದಿದ್ದಾರೆ. ತಮ್ಮ ಮಾತು, ಕೃತಿಗಳಿಗೆ ಅವರು ಸ್ವತಃ ಜವಾಬ್ದಾರರಾಗಿದ್ದಾರೆ ಎಂಬುದು ಈ ಸೂಕ್ತಗಳಿಂದ ಸ್ಪಷ್ಟವಾಗುತ್ತದೆ. ಮಹಿಳೆ ಶಾರೀರಿಕವಾಗಿ ಸ್ವಲ್ಪ ಮೃದುವಾಗಿದ್ದರೂ ಆಕೆ ಪುರುಷರ ಕೈಯ ಆಟಿಕೆಯಲ್ಲ. ಪುರುಷನಂತೆ ಆಕೆಗೂ ತನ್ನದೇ ಆದ ಕರ್ತವ್ಯ ಗಳಿವೆ.

ಅವುಗಳಿಗೆ ಆಕೆ ಸಂಪೂರ್ಣ ಹೊಣೆಯಾಗಿದ್ದಾಳೆ. ಸ್ತ್ರೀ-ಪುರುಷ ಸಮಾನತೆಗೆ ಸಂಬಂಧಿಸಿದ ಈ ಕಲ್ಪನೆ ಸಾವಿರದ ನಾಲ್ನೂರು ವರ್ಷಗಳ ಹಿಂದೆ ಎಷ್ಟು ಕ್ರಾಂತಿಕಾರಕವಾಗಿದ್ದಿರ ಬಹುದೆಂದು ಸ್ವಲ್ಪ ಊಹಿಸಿ. ಅಷ್ಟೇ ಅಲ್ಲ, ಇಂದಿಗೂ ಅದು ಮಹಿಳೆಯರ ಘನತೆ, ಗೌರವ ಕುರಿತ ಶ್ರೇಷ್ಠ ಘೋಷಣಾ ಪತ್ರ ಎಂಬುದನ್ನು ನಾವು ಗಮನಿಸ ಬೇಕಾಗಿದೆ. ಧರ್ಮಗಳ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಪವಿತ್ರ ಕುರ್‌ಆನ್ ತನ್ನ ಸಂದೇಶ ಗಳನ್ನು ಪುರುಷರಂತೆಯೇ ಸ್ತ್ರೀಯರಿಗೂ ನೇರ ಅಭಿಸಂಬೋಧನೆಯ ಮೂಲಕ ತಲುಪಿಸಿತು. ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಸ್ತ್ರೀ-ಪುರುಷರನ್ನು ಪರಸ್ಪರ ಸಂಗಾತಿಯೆಂದು ಘೋಷಿಸಿತು.

"ಸತ್ಯವಿಶ್ವಾಸಿ ಪುರುಷರು ಮತ್ತು ಸತ್ಯವಿಶ್ವಾಸಿ ಸ್ತ್ರೀಯರು ಇವರೆಲ್ಲ ಪರಸ್ಪರ ಆಪ್ತರು. ಅವರು ಒಳಿತುಗಳ ಅಪ್ಪಣೆ ಕೊಡುತ್ತಾರೆ ಮತ್ತು ಕೆಡುಕುಗಳಿಂದ ತಡೆಯು ತ್ತಾರೆ. ನಮಾಝ್ ಸಂಸ್ಥಾಪಿಸುತ್ತಾರೆ. ಝಕಾತ್ ಕೊಡುತ್ತಾರೆ ಮತ್ತು ಅಲ್ಲಾಹ್ ಹಾಗೂ ಅವನ ಸಂದೇಶವಾಹಕರ ಅನುಸರಣೆ ಮಾಡುತ್ತಾರೆ." (ಅತ್ತೌಬಃ-71)

ಮಹಿಳೆಯ ಘನತೆ, ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಇದಕ್ಕಿಂತಲೂ ಮಿಗಿಲಾದ ಹೇಳಿಕೆ ಇರಲು ಸಾಧ್ಯವೇ? ಪವಿತ್ರ ಕುರ್‌ಆನಿನ ಪ್ರಕಾರ ಒಳಿತನ್ನು ಸಂಸ್ಥಾಪಿಸು ವುದು ಮತ್ತು ಕೆಡುಕನ್ನು ನಿರ್ಮೂಲನಗೊಳಿಸುವುದು ಮುಸ್ಲಿಮರ ಜೀವನದ ಉದ್ದೇಶವಾಗಿದೆ. ಇಲ್ಲಿಯೂ ಪುರುಷರಂತೆಯೇ ಮಹಿಳೆಯರಿಗೂ ಸಮಾನ ಕರ್ತವ್ಯ ಗಳಿವೆ. ಈ ಮಾರ್ಗದಲ್ಲಿ ಎದುರಾಗುವ ಸಂಕಷ್ಟಗಳನ್ನು ಇಬ್ಬರೂ ಸಹಿಸುತ್ತಾರೆ. ಕರ್ತವ್ಯಗಳಲ್ಲಷ್ಟೇ ಇಸ್ಲಾಮ್ ಸಮಾನತೆಯನ್ನು ಘೋಷಿಸಿದ್ದಲ್ಲ. ಪ್ರತಿಫಲದ ಬಗ್ಗೆ ಹೇಳುವಾಗಲೂ ಇಬ್ಬರನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿದೆ.

"ಅಲ್ಲಾಹನನ್ನು ಅತ್ಯಧಿಕ ಸ್ಮರಿಸುವ ಎಲ್ಲ ಪುರುಷರು ಮತ್ತು ಮಹಿಳೆಯರಿಗೆ ಅಲ್ಲಾಹನು ಕ್ಷಮೆ ಮತ್ತು ಅತಿ ದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ."

(ಅಲ್ ಅಹ್‌ಝಾಬ್: 35)

ಈ ಸೂಕ್ತದಲ್ಲಿ ಅಲ್ಲಾಹನು ಪುರುಷರು ಮತ್ತು ಸ್ತ್ರೀಯರಿಗೆ ದೊರೆಯುವ ಪ್ರತಿಫಲ ಸಮಾನವಾದರೂ ಅವುಗಳನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಿದ್ದಾನೆ. ಜತೆಗೆ ಇಲ್ಲಿ ಪುರುಷರು ಮತ್ತು ಸ್ತ್ರೀಯರಲ್ಲಿ ಇರಲೇಬೇಕಾದ ಗುಣಗಳನ್ನು ಸ್ಪಷ್ಟಪಡಿಸಲಾಗಿದೆ. ಎಲ್ಲಿಯವರೆಗೆ ಈ ಗುಣಗಳನ್ನು ಸ್ತ್ರೀ-ಪುರುಷರು ಬೆಳೆಸುವುದಿಲ್ಲವೋ ಅಲ್ಲಿಯವರೆಗೆ ಸ್ವಸ್ಥ ಸಮಾಜದ ನಿರ್ಮಾಣ ಸಾಧ್ಯವಿಲ್ಲ ಎನ್ನಲಾಗಿದೆ.

ತಾಯಿಯೆಂಬ ನೆಲೆಯಲ್ಲಿ ಮಹಿಳೆಗೆ ಇಸ್ಲಾಮ್ ನೀಡಿರುವ ಸ್ಥಾನಮಾನ ಎಷ್ಟು ಉನ್ನತವಾಗಿದೆಯೆಂದರೆ ಅದಕ್ಕೆ ಮಿಗಿಲಾದ ಸ್ಥಾನಮಾನದ ಬಗ್ಗೆ ಊಹಿಸಲಿಕ್ಕೂ ಸಾಧ್ಯವಿಲ್ಲ. ಪವಿತ್ರ ಕುರ್‌ಆನ್ ಹೆತ್ತವರ ಆಜ್ಞಾನಿರ್ದೇಶನಗಳನ್ನು ಪಾಲಿಸಲು ಆದೇಶಿಸುವಾಗ ತಾಯಿಯನ್ನು ವಿಶೇಷವಾಗಿ ಪ್ರಸ್ತಾಪಿಸಿದೆ. ಸೂರಃ ಲುಕ್ಮಾನ್‌ನ ಈ ಸೂಕ್ತವನ್ನು ಸ್ವಲ್ಪ ಗಮನಿಸಿ:

"ಲುಕ್ಮಾನರು ತಮ್ಮ ಪುತ್ರನಿಗೆ ಉಪದೇಶವೀಯುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ: ಅವರು 'ಮಗನೇ ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬೇಡ, ನಿಜವಾಗಿಯೂ ಶಿರ್ಕ್ ಮಹಾ ಅಕ್ರಮವಾಗಿದೆ' ಎಂದರು. ಮಾನವನಿಗೆ ತನ್ನ ಮಾತಾಪಿತರ ಹಕ್ಕನ್ನು ತಿಳಿದುಕೊಳ್ಳಲು ನಾವೇ ತಾಕೀತು ಮಾಡಿರುತ್ತೇವೆ. ಅವನ ತಾಯಿಯು ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿ ಅವನನ್ನು ತನ್ನ ಗರ್ಭದಲ್ಲಿ ರಿಸಿದಳು ಮತ್ತು ಅವನ ಸ್ತನಪಾನ ಬಿಡುವುದರಲ್ಲಿ ಎರಡು ವರ್ಷಗಳು ಕಳೆದವು. ಆದುದರಿಂದಲೇ ನಾವು ಅವನೊಡನೆ ನನಗೆ ಕೃತಜ್ಞತೆ ಸಲ್ಲಿಸು ಮತ್ತು ನಿನ್ನ ಮಾತಾಪಿತರಿಗೆ ಕೃತಜ್ಞತೆ ಸಲ್ಲಿಸು. ನೀನು ನನ್ನ ಕಡೆಗೇ ಮರಳಬೇಕಾಗಿದೆ ಎಂದು ಉಪದೇಶಿಸಿದೆವು."

(ಲುಕ್ಮಾನ್: 13-14)

ತಾಯಿಯ ಪಾದದಡಿ ಸ್ವರ್ಗವಿದೆ ಎಂಬುದು ಪ್ರವಾದಿ ಮುಹಮ್ಮದ್ ಅವರ ಅತ್ಯಂತ ಪ್ರಸಿದ್ಧ ಹೇಳಿಕೆಯಾಗಿದೆ. ಇನ್ನೊಂದು ಸಂದರ್ಭದಲ್ಲಿ ಪ್ರವಾದಿಯ ಬಳಿಗೆ ಒಬ್ಬ ವ್ಯಕ್ತಿ ಬಂದು ತನ್ನ ಸದ್ವರ್ತನೆಗೆ ಅತಿ ಹೆಚ್ಚು ಅರ್ಹರು ಯಾರು ಎಂದು ಪ್ರಶ್ನಿಸುತ್ತಾನೆ. ಪ್ರವಾದಿ ಮುಹಮ್ಮದ್ ಆತನಿಗೆ 'ನಿನ್ನ ತಾಯಿ' ಎಂದು ಉತ್ತರಿಸುತ್ತಾರೆ. ಆತ ಅದೇ ಪ್ರಶ್ನೆಯನ್ನು ಮತ್ತೆರಡು ಬಾರಿ ಪುನರಾವರ್ತಿಸಿದಾಗಲೂ ಪ್ರವಾದಿವರ್ಯರು(ಸ) ಅದೇ ಉತ್ತರ ನೀಡುತ್ತಾರೆ. ನಾಲ್ಕನೇ ಬಾರಿ ಪ್ರಶ್ನಿಸಿದಾಗ 'ನಿನ್ನ ತಂದೆ' ಎಂದು ಉತ್ತರಿಸುತ್ತಾರೆ.

ಪ್ರವಾದಿ ಮುಹಮ್ಮದ್(ಸ) ಅವರ ಇನ್ನೊಂದು ವಚನವನ್ನು ಗಮನಿಸಿ:

"ಯಾರಾದರೂ ತನ್ನ ಇಬ್ಬರು ಪುತ್ರಿಯರನ್ನು ಚೆನ್ನಾಗಿ ಸಲಹಿ ಕೌಮಾರ್ಯದ ವರೆಗೆ ಅವರನ್ನು ನೋಡಿಕೊಳ್ಳುತ್ತಾನೋ ಆತ ಮತ್ತು ನಾನು ಸ್ವರ್ಗದಲ್ಲಿ ಅತ್ಯಂತ ನಿಕಟರಾಗಿರುವೆವು. ಅನಂತರ ಪ್ರವಾದಿವರ್ಯರು(ಸ) ತಮ್ಮ ಎರಡು ಬೆರಳುಗಳನ್ನು ಎತ್ತಿ ತೋರಿಸಿದರು."

ತನ್ನ ಹೆಣ್ಮಕ್ಕಳ ಕಾರಣದಿಂದ ತೊಂದರೆಗೆ ಸಿಲುಕಿದ ವ್ಯಕ್ತಿ ಅವರನ್ನು ಚೆನ್ನಾಗಿ ನೋಡಿಕೊಂಡರೆ ಆ ಮಕ್ಕಳು ಆತನನ್ನು ನರಕಾಗ್ನಿಯಿಂದ ರಕ್ಷಿಸುತ್ತಾರೆ.

ಹೆಣ್ಣು ಮಕ್ಕಳನ್ನು ಜೀವಂತ ಹೂಳುತ್ತಿದ್ದ ಕಾಲದಲ್ಲಿ ಈ ಬೋಧನೆಗಳು ಎಷ್ಟೊಂದು ಕ್ರಾಂತಿಕಾರಕವಾದುದು ಎಂಬುದನ್ನು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಆದರೆ ಆಧುನಿಕ ಭಾರತೀಯ ಸಮಾಜದ ಮಟ್ಟಿಗೂ ಇದು ಅನುಸರಣಯೋಗ್ಯವಾಗಿದೆ. ಹೆಣ್ಮಕ್ಕಳನ್ನು ಅನಗತ್ಯ ಹೊರೆಯೆಂದು ಪರಿಗಣಿಸುವ ಪ್ರವೃತ್ತಿ ಮುಂದುವರಿದಿರುವ ನಮ್ಮ ಸಮಾಜದ ಮಟ್ಟಿಗಂತೂ ಇದು ಅಕ್ಷರಶಃ ಮಾದರಿಯಾಗಿದೆ. ಭೌತಿಕವಾದದ ಬಲೆಗೆ ಸಿಲುಕಿ ಹೆಣ್ಣು ಶಿಶು ಹತ್ಯೆ, ಭ್ರೂಣಹತ್ಯೆಗಳು ನಡೆಯುತ್ತಿರುವ ಇಪ್ಪತ್ತೊಂದನೇ ಶತಮಾನದಲ್ಲೂ ಪ್ರವಾದಿವರ್ಯರ(ಸ) ಮಾತುಗಳು ಪ್ರಸ್ತುತತೆ ಉಳಿಸಿಕೊಂಡಿರುವುದು ಗಮನಿಸಬೇಕಾದ ಅಂಶ.

ದಾಂಪತ್ಯ ಜೀವನವನ್ನು ಇಸ್ಲಾಮ್ ಕೇವಲ ಲೈಂಗಿಕ ಕಾಮನೆಗಳ ಈಡೇರಿಕೆಗೆ ಸೀಮಿತಗೊಳಿಸಿಲ್ಲ. ಸಂತಾನೋತ್ಪತ್ತಿಯೊಂದೇ ವಿವಾಹದ ಉದ್ದೇಶ ಎಂದೂ ಅದು ಹೇಳುವುದಿಲ್ಲ. ಪರಸ್ಪರ ಪ್ರೀತಿಯೇ ಗಂಡ ಹೆಂಡಿರ ನಡುವಿನ ಸಂಬಂಧದ ನೈಜ ಬುನಾದಿ ಎಂದು ಇಸ್ಲಾಮ್ ಘೋಷಿಸುತ್ತದೆ.

"ಅವನು ನಿಮಗಾಗಿ ನಿಮ್ಮ ವರ್ಗದಿಂದಲೇ ಜೋಡಿಗಳನ್ನು ಸೃಷ್ಟಿಸಿ, ನೀವು ಅವರ ಬಳಿ ಪ್ರಶಾಂತಿ ಪಡೆಯುವಂತೆ ಮಾಡಿದುದೂ ನಿಮ್ಮ ನಡುವೆ ಪ್ರೇಮ ಮತ್ತು ಅನುಕಂಪವನ್ನುಂಟು ಮಾಡಿದುದೂ ಅವನ ನಿದರ್ಶನಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ವಿವೇಚಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ."

(ಅರ್ರೂಮ್- 21)

ಗಂಡ-ಹೆಂಡಿರ ಮಧ್ಯೆ ಇರುವ ಪ್ರೀತಿ ಮತ್ತು ಅನುರಾಗವನ್ನು ಅಲ್ಲಾಹನ ಮಹಾನ್ ಅನುಗ್ರಹ ಎಂದು ಕುರ್‌ಆನ್ ಬಣ್ಣಿಸುತ್ತದೆ. ಮೇಲಿನ ಸೂಕ್ತದಲ್ಲಿ ಇನ್ನೊಂದು ವಿಷಯವನ್ನೂ ಅಲ್ಲಾಹನು ಸ್ಪಷ್ಟಪಡಿಸಿದ್ದಾನೆ. ಪತ್ನಿಯರು ನಿಮಗಿಂತ ಕೀಳಾದ ಜೀವಿ ಗಳಲ್ಲ ಎಂದು ಪುರುಷರಿಗೆ ಇಲ್ಲಿ ಮನದಟ್ಟು ಮಾಡಲಾಗಿದೆ. ನಿಮ್ಮಿಂದಲೇ ನಿಮ್ಮ ಸ್ತ್ರೀಯರನ್ನೂ ಸೃಷ್ಟಿಸಲಾಗಿದ್ದು ನಿಮ್ಮಲ್ಲಿರುವ ಗುಣಗಳೇ ಅವರಲ್ಲೂ ಇವೆ ಎಂದು ಮನವರಿಕೆ ಮಾಡಲಾಗಿದೆ. ನಿಮ್ಮಿಬ್ಬರ ವ್ಯಕ್ತಿತ್ವ ಪರಸ್ಪರ ಪೂರಕವಾಗಿದೆ. ಅವರು ನಿಮ್ಮ ಪ್ರೀತಿಯನ್ನು ಯಾವ ರೀತಿ ಅಪೇಕ್ಷಿಸುತ್ತಾರೋ ಅದೇ ರೀತಿ ನೀವೂ ಅವರ ಪ್ರೀತಿಗಾಗಿ ಹಂಬಲಿಸುತ್ತೀರಿ ಎಂದು ಅದು ಸ್ಪಷ್ಟಪಡಿಸಿದೆ. ಯಾವ

ರೀತಿ ಪುರುಷ ಮಹಿಳೆಯ ವ್ಯಕ್ತಿತ್ವವನ್ನು ಪೂರ್ಣಗೊಳಿಸುತ್ತಾನೋ ಅದೇ ರೀತಿ ಹೆಣ್ಣು ಪುರುಷನ ವ್ಯಕ್ತಿತ್ವವನ್ನು ಪೂರ್ಣಗೊಳಿಸುತ್ತಾಳೆ ಎನ್ನಲಾಗಿದೆ.

ಈ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ಕುರ್‌ಆನ್ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಹೀಗೆನ್ನುತ್ತದೆ:

"ನೀವು ಅವರೊಂದಿಗೆ ಉತ್ತಮ ರೀತಿಯಿಂದ ಜೀವನ ನಡೆಸಿರಿ."

(ಅನ್ನಿಸಾ:19)

ಪ್ರವಾದಿ ಮುಹಮ್ಮದ್(ಸ) ಅತ್ಯಂತ ಪ್ರಭಾವಶಾಲಿ ರೀತಿಯಲ್ಲಿ ಹೀಗೆಂದಿದ್ದಾರೆ. 'ನಿಮ್ಮ ಪೈಕಿ ಯಾರು ತನ್ನ ಕುಟುಂಬಿಕರ ಜತೆ ಉತ್ತಮ ವರ್ತನೆ ತೋರುತ್ತಾನೋ ಆತನೇ ಅತ್ಯುತ್ತಮನು. ನಾನಂತೂ ನನ್ನ ಮನೆಯವರ ಜತೆ ಅತ್ಯುತ್ತಮವಾಗಿ ವರ್ತಿಸುವವನಾಗಿದ್ದೇನೆ.'

ಯಾವ ರೀತಿ ಮಹಿಳೆಯರ ಮೇಲೆ ಪುರುಷರಿಗೆ ಅಧಿಕಾರವಿದೆಯೋ ಅದೇ ರೀತಿ ಮಹಿಳೆಯರಿಗೂ ಪುರುಷರ ಮೇಲೆ ಅಧಿಕಾರವಿದೆ ಎಂದು ಘೋಷಿಸಿದ ಧರ್ಮ ಇಸ್ಲಾಮ್. ಪ್ರಾಯಶಃ ಮಾನವ ಇತಿಹಾಸದಲ್ಲಿ ಇದಕ್ಕೆ ಮುಂಚೆ ಯಾರೂ ಈ ರೀತಿಯ ಸಮಾನತೆಯ ಘೋಷಣೆ ಹೊರಡಿಸಿರಲಿಲ್ಲ. **"ಪುರುಷರಿಗೆ ಸ್ತ್ರೀಯರ ಮೇಲೆ ಹಕ್ಕಿರುವ ಹಾಗೆಯೇ ಸ್ತ್ರೀಯರಿಗೂ ಪುರುಷರ ಮೇಲೆ ನ್ಯಾಯೋಚಿತ ಹಕ್ಕಿದೆ."**

(ಅಲ್ ಬಕರ:- 228)

ಇಸ್ಲಾಮ್ ಮಹಿಳೆಯರೊಂದಿಗೆ ವರ್ತಿಸುವುದಕ್ಕೆ ಸಂಬಂಧಿಸಿದಂತೆ ಕೆಲವು ಸಾಮಾನ್ಯ ಆದೇಶ ನಿರ್ದೇಶನಗಳನ್ನಷ್ಟೆ ನೀಡಿದ್ದಲ್ಲ. ಬಹಳ ಸ್ಪಷ್ಟವಾಗಿ ಅವರ ಹಕ್ಕುಗಳನ್ನು ಅದು ವಿವರಿಸಿದೆ. ಪತ್ನಿಯೆಂಬ ನೆಲೆಯಲ್ಲಿ ಯಾವ ರೀತಿ ಅವರೊಂದಿಗೆ ಸದ್ವರ್ತನೆ ತೋರಬೇಕು, ವಾರೀಸಿನಲ್ಲಿ ಅವರ ಹಕ್ಕು ಏನು ಎಂಬಿತ್ಯಾದಿ ವಿಷಯ ಗಳನ್ನೂ ಅದು ಸ್ಪಷ್ಟಪಡಿಸಿದೆ. ವಿವಾಹದ ಸಂದರ್ಭದಲ್ಲಿ ಹೆಣ್ಣಿನ ಸಮ್ಮತಿ ಅನಿವಾರ್ಯ ಎಂದು ಹೇಳಲಾಗಿದೆ. ಪುರುಷನಿಗೆ ವಿವಾಹ ವಿಚ್ಛೇದನದ ಅಧಿಕಾರ ಇರುವಂತೆಯೇ ಮಹಿಳೆಗೂ ವಿಚ್ಛೇದನದ ಹಕ್ಕು ನೀಡಲಾಗಿದೆ. ಸಾಮಾಜಿಕ ಬದುಕಿನಲ್ಲಿ ಮಹಿಳೆಯ ಪ್ರತ್ಯೇಕ ಅಸ್ತಿತ್ವವನ್ನು ಇಸ್ಲಾಮ್ ಗುರುತಿಸುತ್ತದೆ. ತನ್ನ ಸಂಪತ್ತನ್ನು ವ್ಯಾಪಾರದಲ್ಲಿ ತೊಡಗಿಸಿ ಲಾಭ ಸಂಪಾದಿಸುವ ಅಧಿಕಾರವೂ ಮಹಿಳೆಗಿದೆ.

ಸಾಮೂಹಿಕ ವಿಚಾರಗಳಲ್ಲಿ ಮಹಿಳೆಗೆ ಅಭಿಪ್ರಾಯ ಮಂಡಿಸುವ ಅಧಿಕಾರವನ್ನು ಇಸ್ಲಾಮ್ ನೀಡಿದೆ. ಪ್ರವಾದಿ ಮುಹಮ್ಮದ್(ಸ) ಅವರು ಹುದೈಬಿಯಾ ಒಪ್ಪಂದದ

ಸಂದರ್ಭದಲ್ಲಿ ತಮ್ಮ ಪತ್ನಿಯರ ಜತೆ ಸಮಾಲೋಚನೆ ನಡೆಸಿ ಇದನ್ನು ವ್ಯಾವಹಾರಿಕವಾಗಿ ತೋರಿಸಿಕೊಟ್ಟರು. ಯಾವುದೇ ರೀತಿಯ ಸ್ವಾತಂತ್ರ್ಯ ಮತ್ತು ಹಕ್ಕಿನ ಕಲ್ಪನೆಯೇ ಅಸಂಭವ ಎನ್ನುವಂತಹ ಕಾಲಘಟ್ಟದಲ್ಲಿ ಪ್ರವಾದಿವರ್ಯರು ಮಹಿಳೆಗೆ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯ ನೀಡಿದ್ದರೆಂಬುದು ಗಮನಿಸಬೇಕಾದ ಅಂಶ.

ಧರ್ಮದ ವಿಚಾರ ಬಂದಾಗ ಹಝ್ರತ್ ಮರ್ಯಮ್, ಹ.ಖದೀಜಾ ಮತ್ತು ಫಿರ್‌ಔನ್‌ನ ಪತ್ನಿ ಆಸಿಯಾ ಅವರನ್ನು ಸತ್ಯವಿಶ್ವಾಸಿಗಳಿಗೆ ಮಾದರಿ ಎಂದು ಘೋಷಿಸಲಾಗಿದೆ. ಹಜ್ಜ್‌ನ ಅವಿಭಾಜ್ಯ ಅಂಗವಾಗಿರುವ ಸಫಾ ಮತ್ತು ಮರ್ವಾಗಳ ನಡುವೆ ಓಡಾಡುವ ಧಾರ್ಮಿಕ ವಿಧಿ ಹ. ಹಾಜಿರಾ ಅವರ ನೆನಪನ್ನು ಸತ್ಯವಿಶ್ವಾಸಿಗಳ ಮನದಲ್ಲಿ ಜೀವಂತಗೊಳಿಸುತ್ತದೆ. ಪ್ರಗತಿಯ ಹೊಸ ಮಜಲುಗಳಿಗೆ ಪ್ರವೇಶಿಸಿರುವ ಆಧುನಿಕ ಜಗತ್ತಿನಲ್ಲಿ ಯಾವುದೇ ಧಾರ್ಮಿಕ ಸಮೂಹ ಮಹಿಳೆಗೆ ಈ ರೀತಿಯ ಗೌರವದ ಸ್ಥಾನಮಾನ ನೀಡಿದೆಯೇ ಎಂಬುದನ್ನು ನಾವು ಚಿಂತಿಸಬೇಕಾಗಿದೆ. ಓರ್ವ ಮಹಿಳೆಯ ಮಾದರಿಯನ್ನು ಅನುಸರಣೆ ಮಾಡುವುದು ಧಾರ್ಮಿಕ ಕರ್ಮವೊಂದರ ನಿರ್ವಹಣೆಗೆ ಕಡ್ಡಾಯವೆಂದು ಯಾವುದೇ ವ್ಯವಸ್ಥೆ ಘೋಷಿಸಿದ ಉದಾಹರಣೆಯಿದೆಯೇ? ಭಾರತದ ತತ್ವ ಶಾಸ್ತ್ರಗಳಂತೂ ಮಹಿಳೆಯಿಂದ ದೂರವಿರುವುದೇ ಆಧ್ಯಾತ್ಮಿಕ ಸಿದ್ಧಿಯ ಮಾರ್ಗ ಎಂದು ಘೋಷಿಸುತ್ತದೆ. ಕ್ರೈಸ್ತ ಧರ್ಮದಲ್ಲಂತೂ ಮಹಿಳೆಯಿಂದ ಸಂಪೂರ್ಣ ಪ್ರತ್ಯೇಕವಾಗಿರುವುದೇ ಪರಮೋನ್ನತ ಆಧ್ಯಾತ್ಮಿಕ ಆಚರಣೆ ಎನ್ನಲಾಗಿದೆ.

ಇಸ್ಲಾಮೀ ಇತಿಹಾಸವನ್ನು ತೆಗೆದು ನೋಡಿದರೆ ಅಲ್ಲಿಯೂ ಧರ್ಮದ ಉತ್ಥಾನಕ್ಕಾಗಿ ಪುರುಷರಿಗೆ ಸರಿದೊರೆಯಾಗಿ ಮಹಿಳೆಯರೂ ತ್ಯಾಗ, ಪರಿಶ್ರಮಗಳನ್ನು ನಡೆಸಿರುವುದು ಸ್ಪಷ್ಟವಾಗುತ್ತದೆ. ಮಹಿಳೆಯರ ತ್ಯಾಗ ಮತ್ತು ಪ್ರೋತ್ಸಾಹ ಇಸ್ಲಾಮಿನ ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸಿರುವುದು ಗಮನಿಸಬೇಕಾದ ಅಂಶ. ಸಾಮಾಜಿಕ ಮತ್ತು ಕೌಟುಂಬಿಕ ಜೀವನಕ್ಕೆ ಸಂಬಂಧಿಸಿದ ಇಸ್ಲಾಮಿನ ಆದೇಶ ನಿರ್ದೇಶಗಳ ಪೈಕಿ ಮೂರರಲ್ಲಿ ಒಂದು ಅಂಶ ಸತ್ಯವಿಶ್ವಾಸಿಗಳಿಗೆ ತಲುಪಿರುವುದು ಹ. ಆಯಿಶಾ ಅವರ ಮೂಲಕ ಎಂಬುದನ್ನು ನಾವು ಮರೆಯಲು ಸಾಧ್ಯವೇ? ಅಷ್ಟೇ ಅಲ್ಲ, ಹ. ಆಯಿಶಾ ಕೇವಲ ಪ್ರವಾದಿ ಮುಹಮ್ಮದರ(ಸ) ಚರ್ಯೆ ಮತ್ತು ಆಚರಣೆಗಳ ಬಗ್ಗೆ ಸತ್ಯವಿಶ್ವಾಸಿಗಳಿಗೆ ಮಾಹಿತಿ ಕೊಡುವ ಕೆಲಸವನ್ನಷ್ಟೆ ಮಾಡಿದ್ದಲ್ಲ. ಅವರು ಧರ್ಮದ ಜ್ಞಾನ, ಚಿಂತನೆ, ದೂರದರ್ಶಿತ್ವಗಳ ದೃಷ್ಟಿಯಿಂದ ತಮ್ಮದೇ ಆದ ಸ್ವತಂತ್ರ ವ್ಯಕ್ತಿತ್ವ

ಹೊಂದಿದ್ದರು. ಇಸ್ಲಾಮಿನ ಹತ್ತು ಹಲವು ಹೋರಾಟಗಳಲ್ಲೂ ಮಹಿಳೆಯರು ಮಹತ್ವದ ಪಾತ್ರ ವಹಿಸಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ಇಸ್ಲಾಮ್ ಮಹಿಳೆಯರಿಗೆ ನೀಡಿರುವ ಸ್ಥಾನಮಾನ ಮತ್ತು ಗೌರವ ಏನು ಎಂಬುದನ್ನು ಅರಿಯಲು ಈ ವಿವರಣೆ ಸಾಕಾಗಲಾರದೇ? ಆದರೆ ಅಪಪ್ರಚಾರ ಮತ್ತು ಕೆಸರೆರಚುವ ಕೆಲಸದಲ್ಲೇ ಖುಷಿ ಕಾಣುವವರಿಗೆ ಇದು ಅರ್ಥವಾಗದಿದ್ದರೆ ಆ ಬಗ್ಗೆ ಕನಿಕರ ಪಡಬೇಕಷ್ಟೆ.

ಮೂರನೆಯ ಆರೋಪ

ಇಸ್ಲಾಮ್ ತನ್ನ ಅನುಯಾಯಿಗಳಲ್ಲಿ ಮತಾಂಧತೆಯ ಭಾವನೆ ಬೆಳೆಸುತ್ತದೆ ಎಂಬುದು ಮೂರನೆಯ ಆರೋಪ. ಮುಸ್ಲಿಮರು ಬೇರಾವುದೇ ವಿಚಾರಧಾರೆ, ಧರ್ಮವನ್ನು ಸಹಿಸುವುದಿಲ್ಲ ಎಂಬುದು ಅಪಪ್ರಚಾರಕ್ಕೆ ಇಳಿದಿರುವವರ ವಾದ. ಸಾಧ್ಯವಾದರೆ ಅವರು ಖಡ್ಗ ಬಳಸಿ ಎಲ್ಲರನ್ನೂ ಮುಸ್ಲಿಮರನ್ನಾಗಿಸುತ್ತಾರೆ. ಇಲ್ಲವೇ ರಾಜಕೀಯ ಅಧಿಕಾರ ಪಡೆದು ಮುಸ್ಲಿಮೇತರರನ್ನು ಗುಲಾಮರನ್ನಾಗಿಸುತ್ತಾರೆ ಎಂಬುದು ಈ ಆರೋಪದ ತಿರುಳು. ಆದ್ದರಿಂದ ಇಂತಹ ದಮನಕಾರಿ ಧರ್ಮದ ನೆಲೆಗಟ್ಟಿನ ಮೇಲೆ ರೂಪುಗೊಳ್ಳುವ ಸಮಾಜ ಅಥವಾ ಸರಕಾರ ಅತ್ಯಂತ ಆಕ್ರಮಣಕಾರಿ ಮತ್ತು ಕಿರಾತವಾಗಿರುತ್ತದೆ ಎಂಬುದು ಅವರ ವಾದ. ಅವರ ಶಿಕ್ಷಾ ಪದ್ಧತಿಯಂತೂ ಇನ್ನೂ ಕ್ರೂರ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನೇ ಅವರು ಕಸಿದು ಬಿಡುತ್ತಾರೆ. ಪ್ರಜಾಸತ್ತೆಯ ಮೌಲ್ಯಗಳ ಬಗ್ಗೆ ಅವರಿಗೆ ಅತೀವ ಅಸಹನೆ. ಆಕ್ರಮಣಕಾರಿ ಮನೋಭಾವ ಹೊಂದಿರುವ ಇವರು ಭಿನ್ನ ವಿಚಾರಧಾರೆಯ ಜನರೊಂದಿಗೆ ಸದಾ ಯುದ್ಧಕ್ಕೆ ಸಿದ್ಧರಾಗುತ್ತಾರೆ. ಇನ್ನು ಸ್ವಯಂ ಘೋಷಿತ ಇಸ್ಲಾಮೀ ಆಂದೋಲನಗಳ ಕತೆಯಂತೂ ವಿಚಿತ್ರವಾಗಿದೆ. ಧರ್ಮವನ್ನು ಮರುಸ್ಥಾಪಿಸುವುದು ಇವರ ಘೋಷಿತ ಧ್ಯೇಯ. ಇದು ಅತ್ಯಂತ ಕಿರಾತ ಮತ್ತು ಭಯೋತ್ಪಾದಕ ಗುಂಪು. ತಮ್ಮ ಮಾತನ್ನು ಕೇಳದ ಮುಸ್ಲಿಮರ ಮೇಲೆ ದೌರ್ಜನ್ಯ ಎಸಗಲೂ ಇವರು ಹಿಂಜರಿಯುವುದಿಲ್ಲ. ಇಸ್ಲಾಮಿನ ಬಗ್ಗೆ ತಾವು ಹೇಳಿದ ಮಾತೇ ಅಂತಿಮ ಎಂಬುದು ಇವರ ಭಾವನೆ. ಈ ಆಂದೋಲನದ ಧ್ವಜವಾಹಕರು ಜಗತ್ತಿನಾದ್ಯಂತ ಹಿಂಸೆ ಮತ್ತು ಭಯೋತ್ಪಾದನೆಯನ್ನು ಹಬ್ಬಿ ಬಿಟ್ಟಿದ್ದಾರೆ. ಪ್ರಜಾಸತ್ತಾತ್ಮಕ ಮಾರ್ಗಗಳಲ್ಲಿ ಇವರಿಗೆ ನಂಬಿಕೆಯೇ ಇಲ್ಲ. ಕೊಲೆ, ರಕ್ತಪಾತದ ಮೂಲಕ ಅಧಿಕಾರದ ಗದ್ದುಗೆ ಏರುವುದು ಇವರ ಉದ್ದೇಶ. ಒಂದು ವೇಳೆ ಈ ಆಂದೋಲನ ಯಶಸ್ವಿಯಾದರೆ ಜಗತ್ತು ಬಹಳಷ್ಟು ತ್ಯಾಗ,

ಪರಿಶ್ರಮದಿಂದ ದಕ್ಕಿಸಿಕೊಂಡ ಎಲ್ಲ ಮೌಲ್ಯಗಳೂ ಪತನಗೊಂಡಂತೆ. ವಿಚಾರ, ಆಚಾರಗಳ ಸ್ವಾತಂತ್ರ್ಯ, ಪ್ರಜಾಸತ್ತೆ, ಮಾನವನ ಘನತೆ, ಸಾಮರಸ್ಯ, ಶಾಂತಿ, ನ್ಯಾಯ ಎಲ್ಲ ಮೌಲ್ಯಗಳೂ ಇವರು ಅಧಿಕಾರಕ್ಕೆ ಬಂದ ದಿನವೇ ಸಾವನ್ನಪ್ಪುತ್ತವೆ.

ಇಸ್ಲಾಮಿ ಆಂದೋಲನ ಮೂಲಭೂತವಾದಿಗಳ ಆಡುಂಬೊಲ. ಆದ್ದರಿಂದ ಈ ದುಷ್ಟ ಶಕ್ತಿಗಳು ಯಶಸ್ವಿಯಾಗದಂತೆ ಎಲ್ಲ ವಿವೇಕವಂತ ಸರಕಾರಗಳು ನೋಡಿಕೊಳ್ಳಬೇಕಾದುದು ಅಗತ್ಯ. ಈ ಉದ್ದೇಶಕ್ಕಾಗಿ ಮಿಥ್ಯ, ಸುಳ್ಳಾರೋಪ, ಷಡ್ಯಂತ್ರ, ಶಸ್ತ್ರ ಬಲ, ದೌರ್ಜನ್ಯ, ಅತಿಕ್ರಮದಂತಹ ಮಾರ್ಗಗಳನ್ನು ಉಪಯೋಗಿಸಿದರೂ ಅಡ್ಡಿಯಿಲ್ಲ. ಹೀಗೆ ವಾದಿಸುವ ಪಾಶ್ಚಾತ್ಯರ ದೃಷ್ಟಿಯಲ್ಲಿ ಉದ್ದೇಶ ಸಾಧನೆಗೆ ತಪ್ಪು ಮಾರ್ಗಗಳನ್ನು ಉಪಯೋಗಿಸುವುದು ನ್ಯಾಯಸಮ್ಮತವೇ.

ಇಸ್ಲಾಮಿನ ಬಗ್ಗೆ ಇರುವ ಈ ಕಲ್ಪನೆಗೆ ಕೇವಲ ಅಜ್ಞಾನ ಅಥವಾ ತಿಳುವಳಿಕೆಯ ಕೊರತೆ ಕಾರಣವೆನ್ನುವಂತಿಲ್ಲ. ಒಂದು ದೀರ್ಘ ಕಾಲದ ಯೋಜನಾಬದ್ಧ ವೈಮನಸ್ಸಿನ ಫಲಶ್ರುತಿಯಿದು. ಈ ವೈಮನಸ್ಸಿನ ಮೊಳಕೆಯಿರುವುದು ಶಿಲುಬೆ ಯುದ್ಧದಲ್ಲಿ. ಅನಂತರ ೧೮ ಮತ್ತು ೧೯ನೆಯ ಶತಮಾನದ ಸಮತಾವಾದ ಅದಕ್ಕೆ ಪೋಷಣೆ ಒದಗಿಸಿತು. ಈ ಮೂಲಕ ಇಸ್ಲಾಮನ್ನು ತೇಜೋವಧೆಗೀಡು ಮಾಡುವ ಏಕೈಕ ಗುರಿ ಹೊಂದಿದ ಸಂಶೋಧಕರ ತಂಡವೊಂದು ಹುಟ್ಟಿಕೊಂಡಿತು. ಇಸ್ಲಾಮಿನ ಶುಭ್ರ ಚಾರಿತ್ರ್ಯವನ್ನು ಕಳಂಕಿತಗೊಳಿಸಲು ಇವರು ಸಂಶೋಧನೆಯ ಹೊಳೆಯನ್ನೇ ಹರಿಸಿಬಿಟ್ಟರು. ಮುಸ್ಲಿಮರ ನಂಬಿಕೆ ಮತ್ತು ವಿಶ್ವಾಸಕ್ಕೆ ನೋವುಂಟು ಮಾಡುವುದು ಅವರ ಉದ್ದೇಶವಾಗಿತ್ತು. ಈ ಮಧ್ಯೆ ಝಿಯೋನಿಸ್ಟರು ಕೂಡಾ ರಂಗ ಪ್ರವೇಶಿಸಿದರು. ಕಳೆದ 50 ವರ್ಷಗಳಲ್ಲಿ ಬ್ರಾಹ್ಮಣ ಫ್ಯಾಸಿಸಂ ತನ್ನ ಕಾರ್ಯತಂತ್ರಕ್ಕೆ ಅಗತ್ಯವಿರುವ ಸಾಕಷ್ಟು ಅಂಶಗಳನ್ನು ಇದರಿಂದ ಪಡೆದುಕೊಂಡಿತು. ಈ ಎಲ್ಲ ಪ್ರಯತ್ನಗಳಲ್ಲಿ ಸಮಾನವಾಗಿರುವಂತಹದ್ದು ಸುಳ್ಳು, ವಂಚನೆ ಮತ್ತು ಮಿಥ್ಯಾರೋಪ. ಈ ಉದ್ದೇಶಕ್ಕಾಗಿ ಮುಸ್ಲಿಮರ ಇತಿಹಾಸವನ್ನು ಅತ್ಯಂತ ಕರಾಳವಾಗಿ ಚಿತ್ರಿಸಲಾಗಿದೆ. ಸುಳ್ಳು ಕತೆಗಳನ್ನು ಕಟ್ಟಲಾಗಿದೆ. ಆಡಳಿತಗಾರರ ವೈಯಕ್ತಿಕ ತಪ್ಪುಗಳನ್ನು ವೈಭವೀಕರಿಸಲಾಗಿದೆ. ದೌರ್ಜನ್ಯ ಮತ್ತು ಆಕ್ರಮಣದ ಘಟನೆಗಳನ್ನು ರಂಗು ರಂಗಾಗಿ ವರ್ಣಿಸಲಾಗಿದೆ. ಆದರೆ ಮುಸ್ಲಿಮರ ನ್ಯಾಯಪ್ರಿಯತೆ, ಹೃದಯ ವೈಶಾಲ್ಯ, ಮುಸ್ಲಿಮೇತರರ ಜತೆ ಅವರ ಉದಾರ ವರ್ತನೆ, ಅವರ ವಚನಬದ್ಧತೆ, ಅಸದೃಶ ಪ್ರಾಮಾಣಿಕತೆ, ಶ್ರೇಷ್ಠ ಚಾರಿತ್ರ್ಯ, ಅದರ ಆಧಾರದಲ್ಲಿ ಅಸ್ತಿತ್ವಕ್ಕೆ ಬಂದ ಶುಭ್ರ ಸಮಾಜ ಇವೆಲ್ಲವನ್ನೂ ಉದ್ದೇಶಪೂರ್ವಕ ಮರೆ ಮಾಚಲಾಗಿದೆ.

ಆಧುನಿಕ ಭಾರತೀಯ ಸಮಾಜದ ಬ್ರಾಹ್ಮಣವಾದವೂ ಇದೇ ಯೋಜನೆಯ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದೆ. ಮುಸ್ಲಿಮ್ ಆಡಳಿತಗಾರರ ಪೈಕಿ ಕೆಲವು ಮಂದಿ ಮಂದಿರ ಧ್ವಂಸಗೊಳಿಸಿದ್ದು ಮಾತ್ರ ಅವರಿಗೆ ಕಾಣುತ್ತದೆ. ಮೊಗಲ್ ಅರಸರು ಹತ್ತು ಹಲವು ಮಂದಿರಗಳಿಗೆ ಜಾಗೀರುಗಳನ್ನು ನೀಡಿದ ಘಟನೆಗಳು ಅವರಿಗೆ ಕಾಣಿಸುವುದಿಲ್ಲ. ಈ ದೇಶದ ಸಂಸ್ಕೃತಿ ಮತ್ತು ನಾಗರಿಕತೆಯ ಪ್ರತಿಯೊಂದು ರಂಗಕ್ಕೂ ಮುಸ್ಲಿಮರು ನೀಡಿದ ಅಮೂಲ್ಯ ಕೊಡುಗೆ ಅವರ ಪೂರ್ವಗ್ರಹಪೀಡಿತ ಕಣ್ಣಿಗೆ ಕಾಣಿಸುವುದೇ ಇಲ್ಲ.

ಪಾಶ್ಚಾತ್ಯ ಸಮಾಜದ ಬೌದ್ಧಿಕ ಅಪ್ರಾಮಾಣಿಕತೆಯೂ ಈ ಯೋಜನೆಯ ಒಂದು ಭಾಗವಾಗಿದೆ. ಗ್ರೀಸ್‌ನ ಪತನದಿಂದ ಹಿಡಿದು ಯುರೋಪಿನ ಪುನರುಜ್ಜೀವನದವರೆಗೂ ಜಗತ್ತು ಶಿಕ್ಷಣ, ಸಂಶೋಧನೆ, ಕಲೆ, ತಂತ್ರಜ್ಞಾನ ಮುಂತಾದ ಎಲ್ಲ ರಂಗಗಳಲ್ಲಿ ಸಂಪೂರ್ಣ ಕತ್ತಲೆಯಲ್ಲಿತ್ತು. ಇದು ಇಸ್ಲಾಮಿನ ಉಚ್ಛ್ರಾಯದ ಕಾಲವೆಂದಾದರೆ ಯುದ್ಧ ಮತ್ತು ಹಿಂಸೆಯ ಕಾಲವೂ ಆಗಿತ್ತು. ಸಮಾಜ ವಿಜ್ಞಾನಕ್ಕೆ ಅವರ ಕೊಡುಗೆ ಶೂನ್ಯ ಎಂಬಂತೆ ಚಿತ್ರಿಸಲಾಯಿತು. ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಚರಿತ್ರೆಯಲ್ಲಿ ಅವರ ಪ್ರಸ್ತಾಪವೇ ಇಲ್ಲ. ರಾಜಕೀಯ ಶಾಸ್ತ್ರದ ವಿಚಾರ ಬಂದಾಗ ಪ್ರಜಾಸತ್ತೆಯ ಸಂಬಂಧವನ್ನು ಗ್ರೀಸ್‌ನ ನಗರ ರಾಷ್ಟ್ರಗಳ ಜತೆ ತಳಕು ಹಾಕಲಾಯಿತು. ಪ್ರಜಾಸತ್ತೆ ಅನಂತರ ಪರ್ಯಾಯ ವ್ಯವಸ್ಥೆಯಾಗಿ ಬೆಳೆದಿದ್ದರೆ ಫ್ರೆಂಚ್ ಕ್ರಾಂತಿಯೇ ಅದಕ್ಕೆ ಕಾರಣ ಎಂದು ನಂಬಿಸಲಾಯಿತು. ಮಧ್ಯಯುಗದಲ್ಲಿ ಇಸ್ಲಾಮ್ ಈ ರಂಗಕ್ಕೆ ಯಾವ ಕೊಡುಗೆಯನ್ನೂ ನೀಡಿಲ್ಲ ಎಂಬ ರೀತಿಯಲ್ಲಿ ಪ್ರಚಾರ ನಡೆಸಲಾಯಿತು. ಇತಿಹಾಸವನ್ನು ಐರೋಪ್ಯ ಯುಗದ ಆಧಾರದಲ್ಲಿ ವಿಂಗಡಿಸಲಾಯಿತು. ಎಲ್ಲಿಯವರೆಗೆಂದರೆ ವೈಜ್ಞಾನಿಕ ಕ್ರಾಂತಿ ಪುನರುಜ್ಜೀವನ ಆಂದೋಲನದ ಫಲಶ್ರುತಿ ಎಂದು ವ್ಯಾಖ್ಯಾನಿಸಲಿಕ್ಕೂ ಇವರು ಹಿಂಜರಿಯಲಿಲ್ಲ. ಹೊಸ ಹೊಸ ಖಂಡಗಳ ಸಂಶೋಧನೆಯ ಕೀರ್ತಿಯನ್ನೂ ಯುರೋಪಿಯನ್ನರ ಸಾಧನೆಯೆಂದು ಹೇಳಿದರು. ನ್ಯಾಯಶಾಸ್ತ್ರವನ್ನು ಜಗತ್ತಿಗೆ ನೀಡಿದವರು ರೋಮನ್ನರು. ಇಸ್ಲಾಮಿನ ನ್ಯಾಯಶಾಸ್ತ್ರದ ಮೂಲವೂ ರೋಮ್‌ನ ಕೊಡುಗೆ ಎಂದು ಮನಗಾಣಿಸಲು ಪ್ರಯತ್ನಿಸಲಾಯಿತು.

ಈ ಅಪಪ್ರಚಾರಗಳ ಫಲಿತಾಂಶ ಕೂಡಾ ಇವರ ನಿರೀಕ್ಷೆಗೆ ಅನುಗುಣವಾಗಿಯೇ ಇತ್ತು. ಜನಸಾಮಾನ್ಯರಷ್ಟೆ ಅಲ್ಲ, ಮುಸ್ಲಿಮ್ ಸಮುದಾಯದ ಒಂದು ದೊಡ್ಡ ವಿಭಾಗವೂ ಇವರ ಮೋಸದಾಟಕ್ಕೆ ಬಲಿಬಿದ್ದರು. ಇಸ್ಲಾಮ್ ಕೇವಲ ಕೆಲವು ಆಚಾರ, ಆರಾಧನೆಗಳ ಧರ್ಮ ಎಂದು ಸ್ವತಃ ಮುಸ್ಲಿಮರೇ ನಂಬತೊಡಗಿದರು.

ಮತ್ತೊಂದೆಡೆ ಇಸ್ಲಾಮನ್ನು ತೇಜೋವಧೆಗೆ ಗುರಿಪಡಿಸುವ ಪ್ರಯತ್ನವೂ ಎಗ್ಗಿಲ್ಲದೆ ಮುಂದು ವರಿಯಿತು. ರಕ್ತದಾಹಿಗಳು ಮತ್ತು ಆಕ್ರಮಣಕಾರಿಗಳಿಗೆ ಈ ಧರ್ಮವೇ ಸ್ಫೂರ್ತಿ ಎಂದು ನಂಬಿಸಲಾಯಿತು. ಕರುಣೆ, ಔದಾರ್ಯ, ಸ್ನೇಹಕ್ಕೆ ಇಲ್ಲಿ ಯಾವ ಅವಕಾಶವೂ ಇಲ್ಲ. ಅದು ಶಕ್ತಿಯ ಬಲದಿಂದ ಎಲ್ಲರನ್ನೂ ಮುಸ್ಲಿಮರನ್ನಾಗಿಸ ಬಯಸುತ್ತದೆ. ಅದು ಪ್ರತಿಪಾದಿಸುವ ಶಿಕ್ಷೆಯ ಕಲ್ಪನೆ ಅತ್ಯಂತ ಭಯಾನಕ. ಅದು ಪ್ರಜಾಸತ್ತೆಯ ವೈರಿಯಾಗಿದೆ ಮತ್ತು ಕರ್ಮಠ ಮುಲ್ಲಾಗಳ ಆಡಳಿತ ಸ್ಥಾಪಿಸಬಯಸುತ್ತದೆ. ಒಂದು ವೇಳೆ ಇಸ್ಲಾಮ್ ಧರ್ಮದ ಅನುಯಾಯಿಗಳು ಅಧಿಕಾರಕ್ಕೆ ಬಂದರೆ ಅದೇ ಬಲಾತ್ಕಾರ, ಹಿಂಸೆ, ಸಂಕುಚಿತವಾದ ಮತ್ತು ಭಯಾನಕ ಶಿಕ್ಷಾ ಪದ್ಧತಿ ಜಾರಿಗೆ ಬರುತ್ತದೆ ಎಂದು ಇವರು ನಂಬಿಸಿ ಬಿಟ್ಟಿದ್ದಾರೆ.

ಆದರೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ವಚನಗಳ ಆಧಾರದಲ್ಲಿ ಈ ಆರೋಪಗಳ ಬಗ್ಗೆ ಅಧ್ಯಯನ ನಡೆಸಿದರೆ ದೊರೆಯುವ ಚಿತ್ರಣ ತೀರಾ ಭಿನ್ನವಾದುದು.

ದಯೆಯೇ ಧರ್ಮದ ಮೂಲ

ಇಸ್ಲಾಮಿನ ಮಟ್ಟಿಗೆ ಹೇಳುವುದಾದರೆ ದಯೆಯೇ ಅದರ ಮೂಲ, ಇಡೀ ಮಾನವಕುಲಕ್ಕೆ ಅದು ಅನುಗ್ರಹದ ಸಂದೇಶ ನೀಡುತ್ತದೆ. ಅದು ಮನುಷ್ಯನನ್ನು ಎಲ್ಲ ಗುಲಾಮತನಗಳಿಂದ ವಿಮೋಚಿಸಿ ಜಗದೊಡೆಯನ ದಾಸ್ಯ ಸ್ವೀಕರಿಸುವಂತೆ ಕರೆ ನೀಡುತ್ತದೆ. ಅದು ಪರಿಚಯಿಸುವ ದೇವತ್ವದ ಕಲ್ಪನೆಯೂ ಅತ್ಯಂತ ಮನೋಜ್ಞವಾಗಿದೆ. ದೇವರು ಅತ್ಯಂತ ಶಕ್ತಿಶಾಲಿ ಮತ್ತು ಸರ್ವಶಕ್ತ ಮಾತ್ರವಲ್ಲ, ಕರುಣಾಮಯಿ ಮತ್ತು ದಯಾಮಯಿಯೂ ಹೌದು ಎಂದು ಅದು ಹೇಳುತ್ತದೆ. ಯಾವುದೇ ಕೆಲಸ ಆರಂಭಿಸುವಾಗ ಸತ್ಯವಿಶ್ವಾಸಿಗಳು ದೇವ ನಾಮ ಸ್ಮರಣೆ ಮಾಡುತ್ತಾರೆ. ಅಲ್ಲಿಯೂ ಆತನ ದಯೆ, ಕರುಣೆಯ ಪ್ರಸ್ತಾಪವೇ ಇದೆ. ಪ್ರವಾದಿಗಳ ಮೂಲಕ ಆತ ತನ್ನ ಪರಿಚಯ ಮಾಡಿಸಿಕೊಳ್ಳುವುದೂ ಇವೇ ಗುಣಗಳನ್ನು ಪ್ರಸ್ತಾಪಿಸುವ ಮೂಲಕ.

"ನೀವು ನಿಮ್ಮ ಪ್ರಭುವಿನೊಡನೆ ಕ್ಷಮೆ ಬೇಡಿರಿ ಮತ್ತು ಅವನ ಕಡೆಗೆ ಮರಳಿರಿ. ನಿಶ್ಚಯವಾಗಿಯೂ ನನ್ನ ಪ್ರಭು ಕರುಣಾನಿಧಿಯೂ ತನ್ನ ಸೃಷ್ಟಿಯ ಮೇಲೆ ಪ್ರೇಮವುಳ್ಳವನೂ ಆಗಿರುತ್ತಾನೆ." (ಹೂದ್: 90)

"ಅವರೊಡನೆ ಹೇಳಿರಿ- ನಿಮ್ಮ ಮೇಲೆ ಶಾಂತಿ ಇದೆ. ನಿಮ್ಮ ಪ್ರಭು ದಯಾ ದಾಕ್ಷಿಣ್ಯ ನೀತಿಯನ್ನು ತನ್ನ ಮೇಲೆ ವಿಧಿಸಿಕೊಂಡಿದ್ದಾನೆ."

(ಅಲ್ ಅನ್‌ಆಮ್: 54)

ಇದು ಸನ್ಮಾರ್ಗದ ಧರ್ಮ. ಸನ್ಮಾರ್ಗ ಜಗದೊಡೆಯನ ದಯೆಯ ಪ್ರತೀಕ ಮತ್ತು ಆತನ ಅನುಗ್ರಹಗಳ ಅಭಿವ್ಯಕ್ತಿಯಾಗಿದೆ.

"ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಒಂದು ಸುವ್ಯಕ್ತ ಪ್ರಮಾಣ, ಮಾರ್ಗದರ್ಶನ ಮತ್ತು ಕೃಪೆಯು ಬಂದು ಬಿಟ್ಟಿದೆ." (ಅಲ್ ಅನ್‌ಆಮ್:157)

ಆತ ತನ್ನ ದಾಸರನ್ನು ಅತಿಯಾಗಿ ಪ್ರೀತಿಸುತ್ತಾನೆ. ಆತನ ಕರುಣೆ ಅತ್ಯಂತ ವಿಶಾಲವಾಗಿದೆ. ಜನರು ಪರಸ್ಪರರ ಬಗ್ಗೆ ಹೊಂದಿರುವ ಕರುಣೆ ಆತನ ಕರುಣೆಯ ಅಗಾಧತೆಗೆ ಹೋಲಿಸಿದರೆ ತೀರಾ ನಗಣ್ಯವಾದುದು. ಮಾರ್ಗಭ್ರಷ್ಟ ದಾಸ ಮತ್ತೆ ಸನ್ಮಾರ್ಗಕ್ಕೆ ಮರಳಿದರೆ ಆತ ಅತ್ಯಂತ ಹೆಚ್ಚು ಸಂತುಷ್ಟನಾಗುತ್ತಾನೆ. ತನ್ನ ಒಂಟೆಯನ್ನು ಕಳೆದುಕೊಂಡ ಮಾಲಿಕ ಇದ್ದಕ್ಕಿದ್ದಂತೆ ಒಂಟೆ ಪತ್ತೆಯಾದಾಗ ಎಷ್ಟು ಸಂಭ್ರಮಿಸುತ್ತಾನೋ ಅದೇ ರೀತಿ ಮಾರ್ಗಭ್ರಷ್ಟ ವ್ಯಕ್ತಿ ಮತ್ತೆ ಸನ್ಮಾರ್ಗಕ್ಕೆ ಮರಳಿದರೆ ಅಲ್ಲಾಹನು ಸಂತುಷ್ಟನಾಗುತ್ತಾನೆ. ಆತ ತನ್ನ ದಾಸರು ತಪ್ಪು ಮಾಡುವುದನ್ನೇ ಕಾದು ನಿಲ್ಲುವಂತಹ ಸರ್ವಾಧಿಕಾರಿ ಆಡಳಿತಗಾರನಲ್ಲ. ತಾನು ಕ್ಷಮಾಶೀಲ ಮತ್ತು ಪಶ್ಚಾತ್ತಾಪ ಸ್ವೀಕರಿಸುವವನೆಂಬ ಭರವಸೆಯನ್ನು ಪಾಪ ಎಸಗುವವರಿಗೆ ಪದೇ ಪದೇ ನೀಡುತ್ತಾನೆ.

"ವಾಸ್ತವದಲ್ಲಿ ನಿನ್ನ ಪ್ರಭು ಜನರ ಅತಿರೇಕಗಳನ್ನು ಲೆಕ್ಕಿಸದೆ ಕ್ಷಮಾದಾನ ಮಾಡುವವನು ಮತ್ತು ನಿನ್ನ ಪ್ರಭು ಘೋರ ಶಿಕ್ಷೆಗೆ ಗುರಿಪಡಿಸುವವನು ಎಂಬುದೂ ಪರಮಾರ್ಥ." (ಅರ್‌ರಅದ್:6)

"ತಮ್ಮ ಮೇಲೆಯೇ ಅತಿರೇಕವೆಸಗಿಕೊಂಡಿರುವ ನನ್ನ ದಾಸರೇ, ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ." (ಅಝ್ಝುಮರ್:53)

ಯುಕ್ತಿಪೂರ್ಣ ಶೈಲಿ

ದೇವನ ಮಾರ್ಗಕ್ಕೆ ಜನರನ್ನು ಆಹ್ವಾನಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಧೋರಣೆ ಏನು ಎಂಬುದನ್ನೂ ಪವಿತ್ರ ಕುರ್‌ಆನ್ ಸ್ಪಷ್ಟಪಡಿಸುತ್ತದೆ:

"ಓ ಪೈಗಂಬರರೇ, ಯುಕ್ತಿ ಮತ್ತು ಸದುಪದೇಶದೊಂದಿಗೆ ಜನರನ್ನು ನಿಮ್ಮ ಪ್ರಭುವಿನ ಮಾರ್ಗಕ್ಕೆ ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ." (ಅನ್ನಹ್ಲ್:125)

ಸತ್ಯ ಮಾರ್ಗಕ್ಕೆ ಜನರನ್ನು ಆಹ್ವಾನಿಸುವ ಸಂದರ್ಭದಲ್ಲಿ ಕಠಿಣ ಧೋರಣೆ ಸಲ್ಲದು. ಯುಕ್ತಿ ಮತ್ತು ಉಪದೇಶದ ಮೂಲಕ ಜನರನ್ನು ಈ ಮಾರ್ಗಕ್ಕೆ ಆಹ್ವಾನಿಸಬೇಕು. ಒಂದು ವೇಳೆ ವಾಗ್ವಾದದ ಅಗತ್ಯ ತಲೆದೋರಿದರೂ ಯಾವುದೇ

ರೀತಿಯ ಕೆಟ್ಟ ಭಾಷೆ, ಬೈಗುಳಕ್ಕೆ ಇಳಿಯಕೂಡದು ಎಂದು ತಾಕೀತು ಮಾಡಲಾಗಿದೆ. ವ್ಯಕ್ತಿಯ ಭಾವನೆ, ಮಾನಸಿಕ ಸ್ಥಿತಿಯನ್ನು ಗಣನೆಯಲ್ಲಿಟ್ಟುಕೊಂಡೇ ಸಂದೇಶ ಮುಂದಿಡಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಯಾರಾದರೂ ಸಂದೇಶ ಆಲಿಸಲು ನಿರಾಕರಿಸಿದರೆ ಆ ಬಗ್ಗೆ ಒತ್ತಡ ಹೇರುವುದು ಸಲ್ಲ ಎಂದು ಹೇಳಲಾಗಿದೆ:

"ಓ, ಪೈಗಂಬರರೇ, ಜನರು ನಮ್ಮ ವಚನಗಳಲ್ಲಿ ದೋಷಾನ್ವೇಷಣೆ ನಡೆಸುತ್ತಿರುವುದನ್ನು ನೀವು ಕಂಡಾಗ, ಅವರು ಈ ಮಾತುಕತೆಯನ್ನು ಬಿಟ್ಟು ಬೇರೆ ಮಾತುಗಳಲ್ಲಿ ತೊಡಗುವವರೆಗೂ ಅವರ ಬಳಿಯಿಂದ ದೂರ ಸರಿಯಿರಿ. ಒಂದು ವೇಳೆ ಶೈತಾನನು ನಿಮ್ಮನ್ನು ಮರವೆಗೆ ಒಳಪಡಿಸಿದರೆ ನಿಮಗೆ ಈ ಪ್ರಮಾದವು ಮನವರಿಕೆಯಾದ ಬಳಿಕ ಪುನಃ ಇಂತಹ ಅಕ್ರಮಿಗಳ ಹತ್ತಿರ ಕುಳಿತುಕೊಳ್ಳಬೇಡಿರಿ."

(ಅಲ್‌ಅನ್‌ಆಮ್:68)

ಶಕ್ತಿ, ಬಲ ಪ್ರಯೋಗ ಸಲ್ಲ

ಇಸ್ಲಾಮಿನ ಸಂದೇಶವನ್ನು ಬಲಾತ್ಕಾರದಿಂದ ಹೇರುವುದು ಅಥವಾ ಅದಕ್ಕಾಗಿ ಮೋಸ, ವಂಚನೆಗಿಳಿಯುವುದನ್ನು ಕುರ್‌ಆನ್ ಸ್ಪಷ್ಟವಾಗಿ ನಿಷೇಧಿಸಿದೆ. ಧರ್ಮದ ಪ್ರಚಾರಕ್ಕಾಗಿ ವಾಸ್ತವಿಕತೆಗಳನ್ನು ತಿರುಚುವುದು ಸಲ್ಲ ಎಂಬುದು ಕುರ್‌ಆನಿನ ನಿಲುವು. ಇಸ್ಲಾಮಿನ ದೃಷ್ಟಿಯಲ್ಲಿ ಕೇವಲ ಉದ್ದೇಶವಷ್ಟೆ ಉನ್ನತವಾಗಿದ್ದರೆ ಸಾಲದು. ಆ ಉದ್ದೇಶ ಸಾಧನೆಗಾಗಿ ಬಳಸುವ ಮಾರ್ಗವೂ ಪ್ರಾಮಾಣಿಕವಾಗಿರಬೇಕು.

"ಸಂದೇಶವಾಹಕರೇ! ಕೆಡುಕನ್ನು ಅತ್ಯುತ್ತಮ ವಿಧಾನದಿಂದ ನೀಗಿಸಿರಿ. ನಿಮ್ಮ ಮೇಲೆ ಅವರು ಹೊರಿಸುತ್ತಿರುವ ಆರೋಪಗಳನ್ನು ನಾವು ಚೆನ್ನಾಗಿ ಬಲ್ಲೆವು."

(ಅಲ್ ಮೂಮಿನೂನ್- 96)

"ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ." (ಅಲ್ ಕಾಫಿರೂನ್-6)

ಇಸ್ಲಾಮ್, ವಿಚಾರ ಮತ್ತು ನಂಬಿಕೆಗಳ ಭಿನ್ನತೆ ಅಲ್ಲಾಹನ ಯುಕ್ತಿಯಾಗಿದೆ ಎಂದು ಹೇಳುತ್ತದೆ. ಆ ಭಿನ್ನಾಭಿಪ್ರಾಯಗಳನ್ನು ಸಂಪೂರ್ಣ ಕೊನೆಗೊಳಿಸಿ ಎಲ್ಲರನ್ನೂ ಬಲಾತ್ಕಾರದಿಂದ ಮುಸ್ಲಿಮರನ್ನಾಗಿಸುವ ಅಧಿಕಾರ ಯಾರಿಗೂ ಇಲ್ಲ. ಒಟ್ಟಿನಲ್ಲಿ ಇದು ಅಲ್ಲಾಹನ ಯುಕ್ತಿಯ ಒಂದು ಭಾಗವಾಗಿದೆ. ಮಿಥ್ಯ ಅಸ್ತಿತ್ವದಲ್ಲಿದ್ದರೆ ತಾನೆ ಸತ್ಯದ ಪರೀಕ್ಷೆ ಸಾಧ್ಯವಾಗುವುದು?

"ಆದುದರಿಂದ ನೀವು ಅಲ್ಲಾಹನಿಂದ ಅವತೀರ್ಣಗೊಂಡ ಕಾನೂನಿನ ಪ್ರಕಾರ ಜನರ ವ್ಯವಹಾರಗಳನ್ನು ತೀರ್ಮಾನಿಸಿರಿ ಮತ್ತು ನೀವು ನಿಮ್ಮ ಬಳಿಗೆ ಬಂದಿರುವ

ಸತ್ಯದಿಂದ ವಿಮುಖರಾಗಿ, ಅವರ ಇಚ್ಛೆಗಳನ್ನು ಅನುಸರಿಸಬೇಡಿರಿ. ನಾವು ನಿಮ್ಮ ಪೈಕಿ ಪ್ರತಿಯೊಬ್ಬನಿಗೆ ಒಂದು ಧರ್ಮಶಾಸ್ತ್ರ ಮತ್ತು ಕರ್ಮಮಾರ್ಗವನ್ನು ನಿಶ್ಚಯಿಸಿದೆವು. ನಿಮ್ಮ ದೇವನು ಇಚ್ಛಿಸುತ್ತಿದ್ದರೆ ನಿಮ್ಮೆಲ್ಲರನ್ನು ಒಂದೇ ಸಮುದಾಯವನ್ನಾಗಿ ಮಾಡಲು ಸಾಧ್ಯವಿತ್ತು. ಆದರೆ ಅವನು ನಿಮಗೆ ಏನು ನೀಡಿರುವನೋ ಅದರಲ್ಲಿ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಹೀಗೆ ಮಾಡಿದನು. ಆದುದರಿಂದ ಸತ್ಕರ್ಮಗಳಲ್ಲಿ ಪರಸ್ಪರ ಸ್ಪರ್ಧಿಸಲು ಪ್ರಯತ್ನಿಸಿರಿ. ಕೊನೆಗಂತು ನಿಮಗೆಲ್ಲರಿಗೂ ಅಲ್ಲಾಹನ ಕಡೆಗೆ ಮರಳಿ ಹೋಗಲಿಕ್ಕಿದೆ. ಆಗ ನೀವು ಭಿನ್ನಾಭಿಪ್ರಾಯವಿರಿಸಿಕೊಳ್ಳುತ್ತಿರುವ ವಿಷಯುಗಳ ವಸ್ತುಸ್ಥಿತಿಯನ್ನು ಅವನು ನಿಮಗೆ ತೋರಿಸಿಕೊಡುವನು."

(ಅಲ್ ಮಾಇದಃ-48)

"ಸರಿ, ಸಂದೇಶವಾಹಕರೇ, ನೀವು ಉಪದೇಶ ಮಾಡುತ್ತಾ ಸಾಗಿರಿ. ನೀವು ಕೇವಲ ಉಪದೇಶಕರು. ಅವರ ಮೇಲೇನೂ ಬಲಾತ್ಕಾರ ಮಾಡುವವರಲ್ಲ."

(ಅಲ್‌ಗಾಷಿಯಃ-21,22)

ಸತ್ಯಧರ್ಮದ ಸ್ವಭಾವವೇ ಒತ್ತಾಯ, ಬಲಾತ್ಕಾರವನ್ನು ದ್ವೇಷಿಸುವುದು. ಅದು ದೇಹವನ್ನಷ್ಟೆ ಅಲ್ಲ, ಮನಸ್ಸಿನ ಆಳದಲ್ಲಿ ಶರಣಾಗತಿಯ ಪ್ರಜ್ಞೆಯನ್ನು ಉದ್ದೀಪಿಸ ಬಯಸುತ್ತದೆ. ಆದ್ದರಿಂದಲೇ ಕುರ್‌ಆನ್ ಹೀಗೆ ಹೇಳುತ್ತದೆ:

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ. ಸನ್ಮಾರ್ಗವು ದುರ್ಮಾಗದಿಂದ ಬೇರ್ಪಡಿಸಲ್ಪಟ್ಟಿದೆ. ಇನ್ನು ಅತಿಕ್ರಮವನ್ನು ನಿರಾಕರಿಸಿ ಅಲ್ಲಾಹನಲ್ಲಿ ವಿಶ್ವಾಸವಿಟ್ಟಾತನು ಎಂದೆಂದಿಗೂ ಮುರಿಯದಂತಹ ಬಲವಾದ ಆಧಾರವನ್ನು ನೆಚ್ಚಿಕೊಂಡನು. ಅವನು ಆಶ್ರಯ ಪಡೆದ ಅಲ್ಲಾಹ್ ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ."

(ಅಲ್‌ಬಕರಃ-256)

ನ್ಯಾಯ

ಇಸ್ಲಾಮಿನ ಉದ್ದೇಶವೇ ನ್ಯಾಯ ಮತ್ತು ಸಮಾನತೆಯ ಸ್ಥಾಪನೆ ಎಂದು ಪವಿತ್ರ ಕುರ್‌ಆನ್ ಹೇಳುತ್ತದೆ.

ತನ್ನ ಅನುಯಾಯಿಗಳಿಗೆ ಸತ್ಯ ಮತ್ತು ನ್ಯಾಯದ ಸ್ಥಾಪನೆಯ ಕರೆ ನೀಡುವ ಧರ್ಮದ ವಿರುದ್ಧ ಬಲಾತ್ಕಾರದ ಆರೋಪ ಹೊರಿಸುವುದು ತೀರಾ ಬಾಲಿಶತನವಾಗಿದೆ.

"ನಾವು ನಮ್ಮ ಸಂದೇಶವಾಹಕರನ್ನು ಸುವ್ಯಕ್ತ ನಿದರ್ಶನಗಳು ಮತ್ತು ಸನ್ಮಾರ್ಗದರ್ಶನದೊಂದಿಗೆ ಕಳುಹಿಸಿದೆವು. ಜನರು ನ್ಯಾಯದಲ್ಲಿ ಸ್ಥಿರವಾಗಿ ನಿಲ್ಲಲೆಂದು ಅವರ ಜೊತೆ ಗ್ರಂಥ ಮತ್ತು ತಕ್ಕಡಿಯನ್ನು ಅವತೀರ್ಣಗೊಳಿಸಿದೆವು."

(ಅಲ್ ಹದೀದ್-25)

"ನೀವು ತೀರ್ಪು ನೀಡುವುದಿದ್ದರೆ, ಸರಿಯಾಗಿ ನ್ಯಾಯಪೂರ್ವಕವಾಗಿ ತೀರ್ಪು ನೀಡಿರಿ. ಅಲ್ಲಾಹ್ ನ್ಯಾಯಪಾಲಕರನ್ನು ಮೆಚ್ಚುತ್ತಾನೆ." (ಅಲ್ ಮಾಇದ:-42)

ಖುರ್‌ಆನ್ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಹೀಗೆನ್ನುತ್ತದೆ:

"ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ." (ಅನ್ನಹ್ಲ್-90)

ಅದು ಎಲ್ಲ ರೀತಿಯ ಅಕ್ರಮವನ್ನೂ ನಿರುತ್ತೇಜಿಸುತ್ತದೆ. ಅಷ್ಟೇ ಅಲ್ಲ, ಅಕ್ರಮ ಮಾರ್ಗಗಳನ್ನು ಅನುಸರಿಸುವುದು ದೇವಕ್ರೋಧಕ್ಕೆ ಕಾರಣವಾಗುತ್ತದೆ ಎಂದು ಎಚ್ಚರಿಸುತ್ತದೆ:

"ಮತ್ತು ಸತ್ಯದಿಂದ ವಿಮುಖರಾದವರು ನರಕದ ಇಂಧನವಾಗುವರು."

(ಅಲ್ ಜಿನ್ನ್-15)

ಪ್ರವಾದಿ ಮುಹಮ್ಮದರ ಬಗ್ಗೆ ಅದು ಹೇಳುವ ಮಾತುಗಳನ್ನು ಸ್ವಲ್ಪ ಗಮನಿಸಿ:

"ಪೈಗಂಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಮಾಡಿ ಕಳುಹಿಸಿರುತ್ತೇವೆ."

(ಅಲ್ ಅಂಬಿಯಾ-107)

ಪ್ರವಾದಿ ಮುಹಮ್ಮದರನ್ನು ಅಲ್ಲಾಹನು ಜಗತ್ತಿಗೆ ಅನುಗ್ರಹವಾಗಿಯೂ ಕರುಣಾಮಯಿಯಾಗಿಯೂ ಕಳುಹಿಸಿದ್ದಾನೆ. ಮಕ್ಕಾದ ತಮ್ಮ ಶತ್ರುಗಳ ಲೌಕಿಕ ನಾಶ ಮತ್ತು ಪಾರಮಾರ್ಥಿಕ ಸೋಲಿನ ಬಗ್ಗೆ ಅವರು ಸದಾ ಚಿಂತಾಕ್ರಾಂತರಾಗುತ್ತಿದ್ದರು. ಅವರು ಈ ಬಗ್ಗೆ ಎಷ್ಟು ಕಾಳಜಿ ಹೊಂದಿದ್ದರೆಂಬುದಕ್ಕೆ ಸ್ವತಃ ಅಲ್ಲಾಹನೇ ಅವರನ್ನುದ್ದೇಶಿಸಿ ಹೇಳಿರುವ ಮಾತು ಸಾಕ್ಷಿಯಾಗಿದೆ.

"ಓ ಪೈಗಂಬರರೇ, ಇವರು ಈ ಬೋಧನೆಯ ಮೇಲೆ ವಿಶ್ವಾಸವಿರಿಸದಿದ್ದರೆ ಪ್ರಾಯಶಃ ನೀವು ಇವರ ಹಿಂದೆ ವ್ಯಥೆಯಿಂದ ನಿಮ್ಮ ಜೀವವನ್ನೇ ಕಳೆದುಕೊಳ್ಳುವವರಿದ್ದೀರಿ."

(ಅಲ್ ಕಹ್ಫ್-6)

ಎಲ್ಲ ಧರ್ಮಗಳ ಬಗ್ಗೆ ಗೌರವ

ಇಸ್ಲಾಮ್ ತನ್ನ ಅನುಯಾಯಿಗಳಿಗೆ ಇತರರು ಪೂಜಿಸುವ ಮತ್ತು ಆರಾಧಿಸುವ ವಸ್ತು ಅಥವಾ ವ್ಯಕ್ತಿಗಳನ್ನು ನಿಂದಿಸಕೂಡದೆಂದು ಸ್ಪಷ್ಟವಾಗಿ ತಾಕೀತು ಮಾಡುತ್ತದೆ. ಈ ಆದೇಶದ ಪ್ರಭಾವವನ್ನು ನಾವು ಇವತ್ತಿಗೂ ಕಾಣುತ್ತೇವೆ. ಸ್ವಯಂ ಘೋಷಿತ ಬುದ್ಧಿ ಜೀವಿಗಳು ಕುರ್‌ಆನ್ ಮತ್ತು ಪ್ರವಾದಿವರ್ಯರ(ಸ) ಬಗ್ಗೆ ಅನುಚಿತ ಮಾತುಗಳನ್ನು ಆಡುತ್ತಲೇ ಇರುತ್ತಾರೆ. ಆದರೆ ಮುಸ್ಲಿಮರು ಇತರರ ಧರ್ಮವನ್ನಾಗಲೀ ಪೂಜಾರ್ಹ ವ್ಯಕ್ತಿಗಳನ್ನಾಗಲೀ ನಿಂದಿಸಿದ ಉದಾಹರಣೆಗಳನ್ನು ನಾವು ನೋಡಲು ಸಾಧ್ಯವಿಲ್ಲ.

"ಓ ಮುಸ್ಲಿಮರೇ, ಅವರು ಅಲ್ಲಾಹನ ಹೊರತು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರನ್ನು ತೆಗಳಬೇಡಿರಿ. ಇದರಿಂದ ಅವರು ಶಿರ್ಕ್‌ಗಿಂತಲೂ ಮುಂದು ವರಿದು ಅಜ್ಞಾನದಿಂದ ಅಲ್ಲಾಹನನ್ನು ತೆಗಳತೊಡಗುವರು." (ಅಲ್ ಅನ್‌ಆಮ್-108)

ತನ್ನ ಅನುಯಾಯಿಗಳಿಗೆ ಈ ರೀತಿಯ ಪರಧರ್ಮ ಸಹಿಷ್ಣುತೆಯನ್ನು ಬೋಧಿಸುವ ಧರ್ಮ ಬಲಾತ್ಕಾರ ಮತ್ತು ಹಿಂಸೆಗೆ ಪ್ರಚೋದನೆ ನೀಡುತ್ತದೆ ಎಂದು ಆರೋಪಿಸಲು ಹೇಗೆ ತಾನೆ ಸಾಧ್ಯ? ಒಂದು ಸಭ್ಯ ಮತ್ತು ಪಾವನ ಸಮಾಜ ಅಸ್ತಿತ್ವಕ್ಕೆ ಬರಬೇಕಾದರೆ ಅದಕ್ಕೆ ಬಳಸುವ ಮಾರ್ಗವೂ ಅತ್ಯಂತ ಪಾವನವಾಗಿರಬೇಕಾದುದು ಅಗತ್ಯ ಎಂಬುದು ಇಸ್ಲಾಮಿನ ಘೋಷಿತ ನೀತಿಯಾಗಿದೆ.

ಇಸ್ಲಾಮ್ ಸಮಾನತೆಯ ಧರ್ಮ

ಎಲ್ಲ ಮಾನವರೂ ಏಕದೇವನ ಸೃಷ್ಟಿ ಎಂಬುದು ಕುರ್‌ಆನಿನ ಮೂಲಭೂತ ಬೋಧನೆಯಾಗಿದೆ. ಪುರುಷರು ಮತ್ತು ಸ್ತ್ರೀಯರು ಸೃಷ್ಟಿಯ ಆಧಾರದಲ್ಲಿ ಸಮಾನರಾಗಿದ್ದಾರೆ. ಮಾತ್ರವಲ್ಲ ಅವರೊಂದಿಗಿನ ವರ್ತನೆಯ ರೀತಿಯೂ ಸಮಾನವಾಗಿರಬೇಕೆಂದು ಸ್ಪಷ್ಟಪಡಿಸಲಾಗಿದೆ. ಅದು ಮನುಷ್ಯರ ಮಧ್ಯೆ ಯಾವುದೇ ಕೃತಕ ಭೇದಭಾವವನ್ನು ಅಂಗೀಕರಿಸುವುದಿಲ್ಲ. ಕರಿಯ-ಬಿಳಿಯ, ಬಡವ-ಧನಿಕ, ಪಾಶ್ಚಾತ್ಯ-ಪೌರ್ವಾತ್ಯವೇ ಮೊದಲಾದ ಎಲ್ಲರೂ ಮನುಷ್ಯರೆಂಬ ನೆಲೆಯಲ್ಲಿ ಸಮಾನರೆಂಬುದು ಇಸ್ಲಾಮಿನ ಬೋಧನೆ. ಅವರ ಮಧ್ಯೆ ಜಾತಿ, ಜನಾಂಗ, ಗೋತ್ರ, ಭಾಷೆಯ ಆಧಾರದಲ್ಲಿ ಮೇಲು, ಕೀಳೆಂಬ ವಿಂಗಡನೆಗೆ ಇಲ್ಲಿ ಅವಕಾಶವಿಲ್ಲ. ಅದು ಎಲ್ಲ ಮನುಷ್ಯ ಪ್ರಾಣವನ್ನೂ ಅತ್ಯಂತ ಪವಿತ್ರ ಮತ್ತು ಗೌರವಾರ್ಹ ಎಂದು ಸಾರುತ್ತದೆ. ಯಾರನ್ನೂ ತನ್ನ ಸ್ವಾರ್ಥಕ್ಕೆ ಬೇಕಾಗಿ ದಾಸ್ಯಕ್ಕೆ ಗುರಿಪಡಿಸಲು ಅದು ಆಸ್ಪದ ನೀಡುವುದಿಲ್ಲ:

"ಜನರೇ, ನೀವು ನಿಮ್ಮ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು." **(ಅನ್ನಿಸಾ-1)**

ಮನುಷ್ಯ ಸಮಾನತೆಯ ಈ ಅಮೋಘ ಸಂದೇಶವನ್ನು ಪ್ರವಾದಿ ಮುಹಮ್ಮದರು ತಮ್ಮ ಅಂತಿಮ ಭಾಷಣ ಅಥವಾ ಹಜ್ಜತುಲ್ ವಿದಾದಲ್ಲೂ ಪುನರುಚ್ಚರಿಸಿದ್ದಾರೆ. ಅರಬನಿಗೆ ಅರಬೇತರನಿಗಿಂತ, ಬಿಳಿಯನಿಗೆ ಕರಿಯನಿಗಿಂತ ಯಾವ ಮೇಲ್ಮೆಯೂ ಇಲ್ಲ ಎಂದು ಅವರು ನೆರೆದಿದ್ದ ಲಕ್ಷಕ್ಕೂ ಮಿಕ್ಕಿದ ಜನರ ಮುಂದೆ ಘೋಷಿಸಿದ್ದರು. ಎಲ್ಲರೂ ಆದಮರ ಮಕ್ಕಳು ಮತ್ತು ಆದಮನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ ಎಂಬ ವಾಸ್ತವಿಕತೆಯನ್ನು ಅವರು ತಮ್ಮ ಭಾಷಣದಲ್ಲಿ ಮನಗಾಣಿಸಿದ್ದರು.

ಪವಿತ್ರ ಕುರ್‌ಆನ್ ಹೀಗೆನ್ನುತ್ತದೆ:

"ಅಲ್ಲಾಹನು ಸನ್ಮಾನಿಸಿದ ಯಾವ ಜೀವವನ್ನೂ ಅನ್ಯಾಯವಾಗಿ ಕೊಲೆ ಮಾಡಬೇಡಿರಿ." **(ಅನ್‌ಆಮ್- 151)**

ಜೀವವೆಂಬುದು ಅಲ್ಲಾಹನಿಂದ ದೊರೆತ ಅತ್ಯಮೋಘ ಅನುಗ್ರಹವಾಗಿದೆ. ಪ್ರತಿಯೊಂದು ಜೀವಕ್ಕೂ ಪಾವಿತ್ರ್ಯವಿದೆ. ತನ್ನ ಸ್ವಾರ್ಥ ಉದ್ದೇಶಗಳಿಗಾಗಿ ಅಥವಾ ವಿಚಾರಧಾರೆಗಳಿಗಾಗಿ ಮಾನವ ಪ್ರಾಣದೊಂದಿಗೆ ಚೆಲ್ಲಾಟವಾಡುವ ಅಧಿಕಾರ ಯಾರಿಗೂ ಇಲ್ಲ. ಅಷ್ಟೇ ಅಲ್ಲ, ಅದನ್ನು ರಕ್ಷಿಸುವುದು ಪ್ರತಿಯೊಬ್ಬ ಮುಸ್ಲಿಮನ ಹೊಣೆ ಯಾಗಿದೆ. ಜಗತ್ತಿನಲ್ಲಿ ಕ್ಷೋಭೆ ಉಂಟು ಮಾಡಿದ ಕಾರಣಕ್ಕಾಗಿಯಲ್ಲದೆ ಯಾರನ್ನೂ ಕೊಲೆ ಮಾಡಬಾರದೆಂದು ಪವಿತ್ರ ಕುರ್‌ಆನ್ ತಾಕೀತು ಮಾಡುತ್ತದೆ. ಆದರೆ ಇಲ್ಲೂ ಗೂಂಡಾಗಿರಿಗಾಗಲೀ ಅರಾಜಕತೆಗಾಗಲೀ ಅವಕಾಶವಿಲ್ಲ. ನ್ಯಾಯ, ಕಾನೂನುಗಳಿಗೆ ಬದ್ಧವಾಗಿಯೇ ಈ ಹತ್ಯೆಯೂ ನಡೆಯಬೇಕೆಂಬುದು ಇಸ್ಲಾಮಿನ ನಿಲುವು. ಅಷ್ಟೇ ಅಲ್ಲ, ಕ್ಷೋಭೆಯನ್ನು ಅಳಿಸಲು ಎಷ್ಟರ ಮಟ್ಟಿಗೆ ಅಗತ್ಯವಿದೆಯೋ ಅಷ್ಟರ ಮಟ್ಟಿಗೆ ಮಾತ್ರ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಆದ್ದರಿಂದಲೇ ಪವಿತ್ರ ಕುರ್‌ಆನ್ ಪ್ರತೀಕಾರದ ವಿಧಾನಗಳನ್ನೂ ಸ್ಪಷ್ಟವಾಗಿ ಹೇಳಿದೆ:

"ಜೀವಕ್ಕೆ ಬದಲು ಜೀವ, ಕಣ್ಣಿಗೆ ಬದಲು ಕಣ್ಣು, ಮೂಗಿಗೆ ಬದಲು ಮೂಗು, ಕಿವಿಗೆ ಬದಲು ಕಿವಿ, ಹಲ್ಲಿಗೆ ಬದಲು ಹಲ್ಲು ಮತ್ತು ಎಲ್ಲ ಗಾಯಗಳಿಗೆ ಸರಿ ಸಮಾನ ಪ್ರತೀಕಾರ.." **(ಅಲ್ ಮಾಇದ:-45)**

ಮೇಲಿನ ಸೂಕ್ತದಲ್ಲಿ ಸವಿಸ್ತಾರವಾಗಿ ಪ್ರತೀಕಾರದ ವಿಧಾನವನ್ನು ವಿವರಿಸಲಾಗಿದೆ. ಹಾನಿ ಮತ್ತು ನಷ್ಟಕ್ಕೆ ಅನುಗುಣವಾಗಿಯೇ ಪ್ರತೀಕಾರ ಇರಬೇಕು. ಒಂದು ವೇಳೆ

ನೀವು ನಿಮಗೆ ನೋವುಂಟು ಮಾಡಿದವನನ್ನು ಕ್ಷಮಿಸಿದರೆ ಅದು ನಿಮ್ಮನ್ನು ದೇವನಿಗೆ ಮತ್ತಷ್ಟು ಪ್ರಿಯಗೊಳಿಸುತ್ತದೆ. ಕ್ಷಮಿಸುವವನು ಎಲ್ಲ ರೀತಿಯ ಪಾಪಗಳಿಂದ ಮುಕ್ತನಾಗುತ್ತಾನೆ. ಪವಿತ್ರ ಕುರ್‌ಆನ್ ಅಂಥ ಪ್ರತೀಕಾರವನ್ನು ಸಂಪೂರ್ಣ ನಿಷೇಧಿಸುತ್ತದೆ. ಒಂದು ಪ್ರಾಣದ ಬದಲಿಗೆ ಇಡೀ ಕುಟುಂಬವನ್ನು ಅಥವಾ ಇಡೀ ಬಡಾವಣೆಯನ್ನು ನಾಶಪಡಿಸುವ ರಾಕ್ಷಸೀಯ ಪ್ರತೀಕಾರಕ್ಕೆ ಇಸ್ಲಾಮಿನಲ್ಲಿ ಸುತಾರಾಂ ಅವಕಾಶ ಇಲ್ಲ. ಪ್ರತೀಕಾರಾತ್ಮಕ ಕ್ರಮವಾಗಿ ಸ್ತ್ರೀಯರ ಮಾನಭಂಗ ಮಾಡುವುದಾಗಲೀ, ಮಕ್ಕಳನ್ನು, ವೃದ್ಧರನ್ನು ಹಿಂಸಿಸುವುದಾಗಲೀ ಸಮ್ಮತವಲ್ಲ ಎಂದು ಇಸ್ಲಾಮ್ ಸ್ಪಷ್ಟಪಡಿಸುತ್ತದೆ. ಮುಂದುವರಿದ ಮತ್ತು ಸುಸಂಸ್ಕೃತ ಎಂದು ಕರೆಸಿಕೊಳ್ಳುವ ರಾಷ್ಟ್ರಗಳೂ ಇಂದು ಈ ರೀತಿಯ ಕ್ರೂರ ಪ್ರತೀಕಾರಕ್ಕೆ ಮುಂದಾಗುತ್ತಿರುವುದು ನಿಜವಾಗಿಯೂ ಖೇದದ ವಿಷಯ.

ಸಾಮಾನ್ಯ ನಾಗರಿಕರೊಂದಿಗೆ ಯಾವ ರೀತಿ ಸದ್ವರ್ತನೆ ತೋರಬೇಕು ಎಂಬುದನ್ನು ಕುರ್‌ಆನ್ ಹೀಗೆ ವಿವರಿಸಿದೆ:

"ಅಲ್ಲಾಹನು ನಿನಗೆ ಉಪಕಾರ ಮಾಡಿದಂತೆಯೇ ನೀನೂ ಪರೋಪಕಾರ ಮಾಡು." **(ಅಲ್ ಕಸಸ್-77)**

ಇಸ್ಲಾಮ್ ಮತ್ತು ಪ್ರಜಾಸತ್ತೆ

ಪ್ರಜಾಸತ್ತೆಯೇ ಇಸ್ಲಾಮೀ ರಾಷ್ಟ್ರದ ಬುನಾದಿ ಎಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸಿದೆ. ಪ್ರವಾದಿ ಮುಹಮ್ಮದರನ್ನು(ಸ) ಉದ್ದೇಶಿಸಿ ಹೇಳಿರುವ ಈ ಮಾತುಗಳನ್ನು ಸ್ವಲ್ಪ ಗಮನಿಸಿ:

"ಧರ್ಮದ ಕೆಲಸಗಳಲ್ಲಿ ಇವರೊಡನೆ ಸಮಾಲೋಚಿಸಿರಿ. ಆ ಬಳಿಕ, ಯಾವುದಾದರೊಂದು ಅಭಿಪ್ರಾಯದಲ್ಲಿ ನೀವು ದೃಢ ನಿರ್ಧಾರ ತಾಳಿದರೆ ಅಲ್ಲಾಹನ ಮೇಲೆ ಭರವಸೆಯಿಡಿರಿ." **(ಆಲೆ ಇಮ್ರಾನ್-159)**

ಮುಸ್ಲಿಮರು ತಮ್ಮ ಎಲ್ಲ ವ್ಯವಹಾರಗಳನ್ನೂ ಪ್ರಜಾಸತ್ತೆಯ ಮೌಲ್ಯಗಳ ಆಧಾರದಲ್ಲೇ ನಡೆಸಬೇಕು ಎಂದು ತಾಕೀತು ಮಾಡಲಾಗಿದೆ.

"ಅವರು ತಮ್ಮ ವ್ಯವಹಾರಗಳನ್ನು ಪರಸ್ಪರ ಸಮಾಲೋಚನೆಯಿಂದ ನಡೆಸುತ್ತಾರೆ." **(ಅಶ್ಶೂರಾ-38)**

ಪ್ರಜಾಸತ್ತೆಯನ್ನು ಪಶ್ಚಿಮದ ಕೊಡುಗೆ ಎಂದು ಚಿತ್ರಿಸಲು ಕೆಲವು ಚರಿತ್ರೆಕಾರರು ಪ್ರಯತ್ನಿಸುತ್ತಾರೆ. ಪ್ರಜಾಸತ್ತೆಯನ್ನು ಧರ್ಮದ ಮೂಲ ಅಂಗ ಎಂದು ಘೋಷಿಸಿದ ಮೊದಲ ಧರ್ಮ ಇಸ್ಲಾಮ್ ಆಗಿದೆ ಎಂಬ ವಾಸ್ತವಿಕತೆಯನ್ನು ಅವರು ಮರೆ

ಮಾಡುತ್ತಾರೆ. ವಿಪರ್ಯಾಸವೆಂದರೆ ಈ ಇತಿಹಾಸಕಾರರು ಇಸ್ಲಾಮ್ ಮತ್ತು ಪ್ರಜಾಸತ್ತೆ ಪರಸ್ಪರ ಪ್ರತಿಸ್ಪರ್ಧಿಗಳೆಂದು ಚಿತ್ರಿಸಲು ಹೆಣಗುತ್ತಿದ್ದಾರೆ. ನಂಬಿಕೆ ಮತ್ತು ಆಚಾರಗಳ ಭಿನ್ನತೆಯನ್ನು ದೇವನ ಯುಕ್ತಿ ಎಂದು ಘೋಷಿಸುವ ಧರ್ಮದ ಬಗ್ಗೆ ಈ ರೀತಿಯ ಆರೋಪ ಹೊರಿಸುವುದು ನಿಜವಾಗಿಯೂ ಅತ್ಯಂತ ದುರದೃಷ್ಟಕರ ಸಂಗತಿ. ಎಲ್ಲ ಕೃತಕ ಭಿನ್ನಾಭಿಪ್ರಾಯಗಳನ್ನೂ ಅಂತರಗಳನ್ನೂ ಕೆಡವಿ ಮನುಷ್ಯರ ಮಧ್ಯೆ ಸಮಾನತೆ ಸ್ಥಾಪಿಸಬಯಸುವ ಧರ್ಮವನ್ನು ಪ್ರಜಾಸತ್ತೆಯ ವೈರಿ ಎನ್ನುವುದಕ್ಕಿಂತ ಕ್ರೂರ ವ್ಯಂಗ್ಯ ಬೇರೆ ಏನಿರಲು ಸಾಧ್ಯ?

ಇಸ್ಲಾಮಿ ರಾಷ್ಟ್ರದಲ್ಲಿ ಇಸ್ಲಾಮಿನ ಮೂಲಭೂತ ನಂಬಿಕೆಗಳನ್ನು ಅಂಗೀಕರಿಸದ ವ್ಯಕ್ತಿಗಳ ಹಕ್ಕುಗಳೇನು ಎಂಬುದನ್ನೂ ಸ್ಪಷ್ಟವಾಗಿ ವಿವರಿಸಲಾಗಿದೆ. ಪ್ರವಾದಿ ಮುಹಮ್ಮದರ(ಸ) ಕೆಲವು ವಚನಗಳಿಂದ ಇದನ್ನು ಅರ್ಥೈಸಬಹುದಾಗಿದೆ.

"ಎಚ್ಚರಿಕೆ! ಯಾರಾದರೂ ತನ್ನ ಕರಾರಿನ ಮೇರೆಗೆ ನೆಲೆಸಿರುವ ವ್ಯಕ್ತಿಗೆ ಹಾನಿಯುಂಟು ಮಾಡಿದರೆ, ಆತನ ಮೇಲೆ ಸಾಮರ್ಥ್ಯಕ್ಕೆ ಹೆಚ್ಚಿನ ಹೊರೆ ಹೊರಿಸಿದರೆ, ಅಥವಾ ಆತನ ಅನುಮತಿಯಿಲ್ಲದೆ ಏನಾದರೂ ವಸ್ತುವನ್ನು ಆತನಿಂದ ಪಡೆದರೆ ನಾನು ವಿಚಾರಣೆಯ ದಿನದಂದು ಆತನ ಪರ ವಕಾಲತ್ತು ನಡೆಸುತ್ತೇನೆ."

"ನನ್ನ ಬಳಿಕ ಖಲೀಫಾ ಆಗುವ ವ್ಯಕ್ತಿಗೆ ನಾನು ಅಲ್ಲಾಹ್ ಮತ್ತು ಪ್ರವಾದಿಯ ವಾಗ್ದಾನಗಳನ್ನು ಪಾಲಿಸುವಂತೆ ವಸಿಯ್ಯತ್(ಅಂತ್ಯೋಪದೇಶ) ಮಾಡುತ್ತೇನೆ. ಇಸ್ಲಾಮಿ ರಾಷ್ಟ್ರದಲ್ಲಿರುವ ಮುಸ್ಲಿಮೇತರ ಪ್ರಜೆಗಳೊಂದಿಗೆ ಮಾಡಲಾದ ಕರಾರುಗಳನ್ನು ಪಾಲಿಸಬೇಕೆಂಬುದು ವಸಿಯ್ಯತ್ ಆಗಿದೆ. ಅವರ ಪ್ರಾಣ ಮತ್ತು ಸಂಪತ್ತಿನ ರಕ್ಷಣೆಗೆ ಯುದ್ಧ ನಡೆಸಬೇಕು. ಅವರಿಗೆ ಎಷ್ಟು ಹೊರೆ ಹೊರಲು ಸಾಧ್ಯವೋ ಅಷ್ಟನ್ನು ಮಾತ್ರ ನೀಡಬೇಕು."

ಸತ್ಯ ಮತ್ತು ನ್ಯಾಯವೇ ಇಸ್ಲಾಮಿ ರಾಷ್ಟ್ರದ ಅಂತಾರಾಷ್ಟ್ರೀಯ ಸಂಬಂಧದ ಮೂಲ. ವಚನ ಪಾಲಿಸುವುದು ಒಬ್ಬ ಮುಸ್ಲಿಮನ ಧಾರ್ಮಿಕ ಹೊಣೆ ಎಂದು ಸ್ಪಷ್ಟಪಡಿಸಲಾಗಿದೆ.

"ವಚನವನ್ನು ಪಾಲಿಸಿರಿ. ನಿಶ್ಚಯವಾಗಿಯೂ ವಚನದ ಕುರಿತು ನಿಮ್ಮನ್ನು ಪ್ರಶ್ನಿಸಲಾಗುವುದು." (ಬನೀ ಇಸ್ರಾಈಲ್-34)

ಹುದೈಬಿಯಾ ಒಪ್ಪಂದದ ಸಂದರ್ಭದಲ್ಲಿ ಪ್ರವಾದಿ ಮುಹಮ್ಮದರು(ಸ) ಸತ್ಯನಿಷೇಧಿಗಳ ಜತೆ ಮಾಡಿಕೊಂಡ ಕರಾರಿನ ಬಗ್ಗೆ ಪ್ರವಾದಿಯ ಹಲವು

ಅನುಯಾಯಿಗಳಿಗೆ ತೀವ್ರ ಆಕ್ಷೇಪವಿತ್ತು. ಸ್ವತಃ ಹ. ಉಮರ್(ರ) ಅವರೇ ಅದನ್ನು ಉಗ್ರವಾಗಿ ವಿರೋಧಿಸಿದ್ದರು. ಎಲ್ಲರೂ ಅದನ್ನು ಏಕಪಕ್ಷೀಯ ಕರಾರು ಎಂದು ಹೇಳಿ ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಪ್ರವಾದಿವರ್ಯರು(ಸ) ಅತ್ಯಂತ ಅಪಮಾನಕರ ವಾದ ಆ ಒಪ್ಪಂದಕ್ಕೆ ಕೊನೆಯವರೆಗೂ ನಿಷ್ಠರಾಗಿದ್ದರು. ವಿರೋಧಿಗಳು ಒಪ್ಪಂದ ವನ್ನು ಸ್ಪಷ್ಟವಾಗಿ ಉಲ್ಲಂಘಿಸುವವರೆಗೂ ಹುದೈಬಿಯಾ ಒಪ್ಪಂದಕ್ಕೆ ಸತ್ಯವಿಶ್ವಾಸಿಗಳು ಬದ್ಧರಾಗಿದ್ದರು. ನಜ್ರಾನ್‌ನ ಕ್ರೈಸ್ತರೊಂದಿಗೆ ಮಾಡಿಕೊಂಡ ಒಪ್ಪಂದ ಇಸ್ಲಾಮಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಾಯತ್ತತೆಯ ಪ್ರಥಮ ಲಿಖಿತ ದಾಖಲೆಯಾಗಿದೆ. ಇದು ಮಾನವ ಹಕ್ಕಿಗೆ ಸಂಬಂಧಿಸಿದ ಒಂದು ಅಮೋಘ ದಾಖಲೆ. ಮಾನವ ಹಕ್ಕಿನ ಘೋಷಣಾ ಪತ್ರ ಎಂಬ ನೆಲೆಯಲ್ಲೂ ಇದಕ್ಕೆ ವಿಶೇಷ ಮಹತ್ವವಿದೆ. ಆಧುನಿಕ ಜಗತ್ತಿನಲ್ಲಿಯೂ ಇಂತಹ ಉದಾಹರಣೆ ನಮಗೆ ಸಿಗುವುದಿಲ್ಲ. ಇಸ್ಲಾಮ್ ಕೇವಲ ತನ್ನ ಬೋಧನೆ ಮತ್ತು ಸಿದ್ಧಾಂತಗಳ ದೃಷ್ಟಿಯಿಂದ ಮಾತ್ರ ಅಮೋಘ ಧರ್ಮ ಎನಿಸುವುದಲ್ಲ. ಇಸ್ಲಾಮಿನ ಅನುಯಾಯಿಗಳು ಎಲ್ಲ ಕಾಲಗಳಲ್ಲೂ ಭ್ರಾತೃತ್ವ, ಸಮಾನತೆ, ಪ್ರೀತಿ, ಸಚ್ಚಾರಿತ್ರ್ಯದ ಮಾದರಿಯನ್ನು ಜಗತ್ತಿಗೆ ತೋರಿಸುತ್ತಾ ಬಂದಿದ್ದಾರೆ. ಕೆಲವು ಸಂದರ್ಭಗಳಲ್ಲಿ ಮುಸ್ಲಿಮ್ ಆಡಳಿತಗಾರರಿಂದ ಇಸ್ಲಾಮಿನ ಈ ಉದಾತ್ತ ಮೌಲ್ಯಗಳಿಗೆ ಚ್ಯುತಿಯಾಗಿರುವುದು ನಿಜ. ಆದರೆ ಅವುಗಳಿಗೆ ಈ ಆಡಳಿತಗಾರರ ವ್ಯೆಯಕ್ತಿಕ ಮತ್ತು ರಾಜಕೀಯ ಹೆಬ್ಬಯಕೆಗಳೇ ಕಾರಣ ಎಂಬುದನ್ನು ನಾವು ಮರೆಯಕೂಡದು. ಅವರ ವರ್ತನೆಗಳನ್ನು ಇಸ್ಲಾಮಿನ ಜತೆ ತಳಕು ಹಾಕುವುದು ಸತ್ಯಕ್ಕೆ ಅಪಚಾರವೆಸಗಿದಂತೆಯೇ ಸರಿ. ಯುದ್ಧದಂತಹ ಸಂದರ್ಭಗಳಲ್ಲಿ ಪಾಲಿಸಬೇಕಾದ ನೀತಿ, ಶಿಷ್ಟಾಚಾರಗಳನ್ನೂ ಇಸ್ಲಾಮ್ ಕಲಿಸಿದೆ. ಯುದ್ಧದ ಸಂದರ್ಭದಲ್ಲಿ ಆಕ್ರಮಣಕಾರರಲ್ಲ ದವರ ಮೇಲೆ ಆಕ್ರಮಣ ಸಲ್ಲದು ಎಂದು ಹೇಳಲಾಗಿದೆ. ಅಂತೆಯೇ ಮಕ್ಕಳು, ಹೆಂಗಸರು, ಮುದುಕರು ಮತ್ತು ದುರ್ಬಲರ ವಿರುದ್ಧ ಖಡ್ಗ ಎತ್ತುವುದನ್ನು ನಿಷೇಧಿಸ ಲಾಗಿದೆ. ಹೊಲಗಳಿಗೆ ಹಾನಿಯುಂಟು ಮಾಡುವುದಾಗಲೀ ಬೆಳೆಯನ್ನು ನಾಶಪಡಿಸು ವುದಾಗಲೀ ಧರ್ಮಸಮ್ಮತವಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಅಷ್ಟೇ ಅಲ್ಲ, ಅಗತ್ಯಕ್ಕಿಂತ ಹೆಚ್ಚಿನ ಶಕ್ತಿ ಬಳಸುವುದನ್ನೂ ನಿಷೇಧಿಸಲಾಗಿದೆ.

❋ ❋ ❋